ಅಪರಂಜಿ


ಸಂಪುಟ ೬
ಅಕ್ಟೋಬರ್ ೧೯೮೮
ಸಂಚಿಕೆ ೧

ತಿಳಿನಗೆಯ ಕಾರಂಜಿ



ಆನಂದ್
ಚಂಬಾ
ವಿಕಟಕವಿ
ಆರತಿ
ಎಂ. ಎಸ್. ಶ್ರೀರಾಮ್
ಹನುಮಂತೂ
ೇಷ
ವ
ಕುಂಡಿರಾಜ್
ೀರಣ್ಣ

ೇವಲ ಒಂದೂವರೆ ರೂಪಾಯಿ



(ತಿಳಿನಗೆಯ ಕಾರಂಜಿ)

ಸಂಪುಟ ೬ | ಅಕ್ಟೋಬರ್ ೧೯೮೮ | ಸಂಚಿಕೆ ೧

ಚಂದಾ ವಿವರ :

ಬಿಡಿ ಪ್ರತಿ :
ಒಂದೂವರೆ ರೂಪಾಯಿ

ವಾರ್ಷಿಕ ಚಂದಾ : 15 ರೂ.
ಆಜೀವ ಚಂದಾ : 150 ರೂ.
ಪೋಷಕರು : 500 ರೂ.

ಗೌರವ ಸಲಹೆಗಾರರು :
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ

ವಿಳಾಸ :
ಅಪರಂಜಿ ಕಾರ್ಯಾಲಯ
119 [ಹಳೆಯ 36]
6ನೆ ಮುಖ್ಯ ರಸ್ತೆ
ಮಲ್ಲೇಶ್ವರಂ
ಬೆಂಗಳೂರು 560003

ಸಂಪಾದಕ :
ಶಿವಕುಮಾರ್

ಇಂದು ಅಪರಂಜಿಯ ಹುಟ್ಟಿದ ಹಬ್ಬ. ಕಳೆದ ಐದು ವರ್ಷಗಳಿಂದ ಸತತವಾಗಿ ಅಪರಂಜಿಗೆ ಪ್ರೋತ್ಸಾಹ ನೀಡಿದ ಓದುಗರು. ಲೇಖಕರು ಹಾಗೂ ಇತರ ಎಲ್ಲಾ ಹಿತೈಷಿಗಳಿಗೂ ಅಪರಂಜಿ, ಈ ಶುಭ ದಿನದಂದು ತಲೆ ಬಾಗಿ ನಮಿಸುತ್ತಾಳೆ. ಐದು ತುಂಬಿದ ಅಪರಂಜಿ ಇನ್ನು "ಬೆಳೆಯುವ ಮಗು'' ಅನ್ನಿಸಿಕೊಳ್ಳಬೇಕಾದರೆ, ಓದುಗರೆಲ್ಲರ ಸಕ್ರಿಯ ಆಸಕ್ತಿ ಹಾಗೂ ಸಂವೇದನೆ ಅತಿ ಅಗತ್ಯ. ಮುಂಬರುವ ದಿನಗಳಲ್ಲಿ ಇವೆಲ್ಲವೂ ಧಾರಾಳವಾಗಿ ದೊರಕುವುದೆಂದು ಅಪರಂಜಿ ಆಶಿಸುತ್ತಾಳೆ.

ಶಿವಕುಮಾರ್

ಈ ಸಂಚಿಕೆಯಲ್ಲಿ......

ಲೇಖನ	ಲೇಖಕ/ಲೇಖಕಿ	ಪುಟ
ಅಪರಂಜಿ ಕಿಡಿ	ಆನಂದ್	4
ಜಂತರ್ ಮಂತರ್ ಡೈರಿ	ಚಂಬಾ	6
(ಬೆಂಗಳೂರು) ನಗಡಿ !	ವಿಕಟಕವಿ	8
ಮಾನಷ್ಟ ಕಾಯಿದೆಯ ಅನಂತರ	ಆರತಿ	9
ಪಿ.ಜೆ ಗಳ ಅದ್ಭುತ ಲೋಕ	ಎಂ. ಎಸ್. ಶ್ರೀರಾಮ್	12
ನನ್ನ ಕರಾಟೆ	ಆನಂದ್	18
ಒಂದಿಷ್ಟು ಮಿನಿ ಪದ್ಯಗಳು	ಹನುಮಂತೂ	20
ಹಾಸ್ಯ, ವಿನೋದ ವಗೈರೆ	ಶೇಷ	21
ರಿಪ್ ವಾನ್ ವಿಂಕಲ್	ಶಿವು	24
ಕಾರಾಗೃಹದಲ್ಲಿ ಕವಿಗಳು	ಡುಂಡಿರಾಜ್	26
ರಂಗಪ್ಪ ಮತ್ತು ರಾವಣಾಭಾತ್	ಬೀರಣ್ಣ	28

ಮುದ್ರಣ :ಇಂಪ್ರೆಷನ್ಸ್ ಪ್ರಿಂಟರ್ಸ್, ಮಲ್ಲೇಶ್ವರಂ,
ಬೆಂಗಳೂರು–3. ದೂರವಾಣಿ : 363444

ಅಪರಂಜಿ

(ತಿಳಿನಗೆಯ ಕಾರಂಜಿ)

ಸಂಪುಟ ೬ ಅಕ್ಟೋಬರ್ ೧೯೮೮ ಸಂಚಿಕೆ ೧

ಜನ್ಮ ದಿನೋತ್ಸವ ಸಂಚಿಕೆ

ಕರ್ಮಗಳನ್ನು ಮಾಡುತ್ತಾ ನೂರು ವರ್ಷ ಬಾಳಲು ಬಯಸಬೇಕು,

— ಈಶಾವಾಸ್ಯ

ನೂರು ವರ್ಷ ಬಾಳಲಿಚ್ಛಿಸುವವನು ಶಾಸ್ತ್ರದಲ್ಲಿ ವಿಧಿಸಿದ ಅಗ್ನಿಹೋತ್ರಾದಿ ಕರ್ಮಗಳನ್ನು ಫಲದಾಶೆಯಿಲ್ಲದೆ ಮಾಡುತ್ತಾ ಇರಬೇಕು. ಜ್ಞಾನನಿಷ್ಠನಿಗೆ ಈ ಮಾತನ್ನು ಹೇಳಿಲ್ಲ.

ಕರ್ಮಗಳನ್ನು ಎಂದರೆ ವೇದದಲ್ಲಿ ಹೇಳಿರುವ ಕರ್ಮಗಳನ್ನು ಎಂದೇ ಅರ್ಥ ಮಾಡಿಕೊಳ್ಳಬೇಕು. ನಾವು ಕರ್ತವ್ಯವೆಂದಿರುವುದು ಹೊಟ್ಟೆಪಾಡಿಗೆ, ಬಾಳುವೆ ನಡೆಸುವುದಕ್ಕೆ ಮಾಡುವ ಲೋಕಯಾತ್ರೆ. ಲೋಕಯಾತ್ರೆಯನ್ನು ಕುರಿತು ಹೇಳಿದರೂ, ಹೇಳದಿದ್ದರೂ ಅದು ನಡೆದೇ ನಡೆಯುತ್ತದೆ. ಹೀಗಾಗಿ ವೇದಾಂತವು ಜೀವನ ವಿಮುಖ ಎನ್ನುವವರಿಗೆ, ತಾವು ಆಡುವ ಮಾತಿನ ಅರ್ಥವೇನು ಎಂಬುದು ತಿಳಿದಿದೆಯೋ ಎನ್ನುವ ವಿಷಯ ಪರಿಶೀಲನಾರ್ಹವಾಗಿದೆ.

ಕೊರವಂಜಿಯ ಕೆಲಸವನ್ನು ಮುಂದುವರಿಸಿರುವ ಅಪರಂಜಿ ತನ್ನ ಬಾಳಿನ ಉದ್ದಕ್ಕೂ ತಿಳಿನಗೆಯನ್ನು ಹರಡುವ ಕೆಲಸ ಮಾಡುತ್ತಲೇ ಇರುತ್ತಾಳೆ. ನಗೆ ಬರಿಯ ನಗೆಯಾಗದೆ ತಿಳಿವಿನಿಂದ ಕೂಡಿದ್ದಾಗಿರಬೇಕು ಎಂದು ಹಾರೈಸುತ್ತಾಳೆ. ಉಳ್ಳವರ ವಿನೋದ ಮಾತ್ರವಾಗದೆ ನೊಂದವರ, ಜ್ಞಾನಿಗಳ ಮಂದಹಾಸವಾಗಬೇಕೆಂದು ಶ್ರಮಿಸುತ್ತಾಳೆ.

ಲೋಕದಲ್ಲಿ ಜನ ಬರಿಯ ತಮ್ಮ ಕರ್ಮಕ್ಕೆ ಫಲವನ್ನನುಭವಿಸುವುದಿರಲಿ, ಇನ್ನಾರದೋ ಮೂರ್ಖತನಕ್ಕೆ ದಂಡ ತೆರಬೇಕಾಗಿದೆಯಲ್ಲಾ ಎಂದು............ ನಗುತ್ತಾಳೆ.

4

ಅಪರಂಜಿ ಕಿಡಿ

—ಆನಂದ್

ಮುಖ್ಯ ಮಂತ್ರಿ ಅವರು ರಾಜೀನಾಮೆ ಕೊಟ್ಟ ಮಾರನೇ ದಿನವೇ ಭಾರತೀಯ ಟೆಲಿಫೋನ್ ಇಂಡಸ್ಟ್ರೀಸ್‌ನವರು ದೊಡ್ಡ ಜಾಹೀರಾತು ಕೊಡಬಾರದಿತ್ತು !

*　　*　　*　　*

ಹಣವೇ ಇಲ್ಲದಿದ್ದರೆ ಹಣದುಬ್ಬರವೂ ಇರುವುದಿಲ್ಲ.

—ರಂಗೂನ್ ಉದ್ಯಮಿ

ನಮ್ಮ ಅನುಭವವೂ ಇದೇ ಆಗಿದೆ ! !

*　　*　　*　　*

ಎ. ಎಸ್. ಎಲ್. ವಿ. ವೈಫಲ್ಯಕ್ಕೆ ಮಿತಿ ಮೀರಿದ ಭಾರವೇ ಕಾರಣ.

—ತಜ್ಞರ ವರದಿ

ಸಹಜವೇ ! ಭಾರ + ಅತೀಯ ಕ್ಷಿಪಣಿ ಅಲ್ಲವೇ ?

*　　*　　*　　*

ಬಂದೆಯಾ ಬೊಮ್ಮಾಯಿ ಅಂದರೆ ಹೋಗುವೆ ಮ್ಯಾಂಚೆಸ್ಟರಿಗೆ ಅನ್ನೋದೆ ?

*　　*　　*　　*

ಅಂಧರ ಸಹಾಯಾರ್ಥವಾಗಿ ಮಕ್ಕಳಿಂದ ಮೂರು ಕಾಲು ಓಟ ಸ್ಪರ್ಧೆ.

—ಸುದ್ದಿ

ಭಾರತದ ವಿರೋಧ ಪಕ್ಷಗಳ ಜ್ಞಾಪಕ ಬರುತ್ತೆ !

*　　*　　*　　*

ಭರವಸೆ ನೀಡುವ ಮೇಯರ್ ಆಗದೆ ಕಾರ್ಯ ಮಾಡುವೆ !

—ನೂತನ ಮೇಯರ್

ಈ ಭರವಸೆಗಾಗಿ ನಾವು ಚಿರಋಣಿಗಳು !

*　　*　　*　　*

ನಗರದ ಫೋನ್ ವಿನಿಮಯ ಕೇಂದ್ರವನ್ನು ಕಂಪ್ಯೂಟರ್‌ಗಳುನಡೆಸುತ್ತವಂತೆ.

—ಪತ್ರಿಕೆ

ಇದು ಆಶ್ವಾಸನೆಯೋ ಬೆದರಿಕೆಯೋ ?

*　　*　　*　　*

ಕೇಂದ್ರ ಸರ್ಕಾರದ ಮಾನನಷ್ಟ ಮಸೂದೆ ವಿರುದ್ಧ ತೀವ್ರ ಪ್ರತಿಭಟನೆ.

—ಸುದ್ದಿ

ಈ ಮಸೂದೆಯಿಂದ ಕೇಂದ್ರ ಸರ್ಕಾರದ ಮಾನನಷ್ಟವಾಗಿದೆಯಲ್ಲ,
ಅಂತ ಅಪರಂಜಿ ನಕ್ಕಳಂತೆ !

*　　*　　*　　*

ಈ ವರ್ಷದಿಂದ ಚಕ್ರ ತೆರಿಗೆ.

—ಪತ್ರಿಕೆ

ರಸ್ತೆಗಳ Pot holeಗಳಿಗೆ ರಿಯಾಯಿತಿ ಕೊಡುತ್ತಾರೇನೋ ?

*　　*　　*　　*

ಮಾನನಷ್ಟ ಮಸೂದೆಯಿಂದ ನಿಮ್ಮ ಕಿಡಿಗಳಿಗೆ ತೊಂದರೆ ಆಗುತ್ತೇನೋ ಅಂತ ಕಾತರದಿಂದ ಒಬ್ಬರು ವಿಚಾರಿಸಿದ್ದಾರೆ,

ಅದಕ್ಕೇ ಅಪರಂಜಿ ಕನ್ನಡದಲ್ಲಿ ಪ್ರಕಟವಾಗ್ತಿರೋದು !

6

ಜಂತರ್ ಮಂತರ್ ಡೈರಿ

—ಚಂಪಾ

ಬೆಂಗಳೂರಿನಿಂದ ಮದ್ರಾಸಿಗೆ ವರ್ಗವಾದಾಗಿನಿಂದ ಮನಸ್ಸಿನಲ್ಲಿ ಒಂದು ರೀತಿಯ ಕಸಿವಿಸಿ. ಸಮಯಕ್ಕೆ ಸರಿಯಾಗಿ ಬರುವ ಬಸ್ಸುಗಳು, ಎಷ್ಟು ರೂಪಾಯಿ ನೋಟು ಕೊಟ್ಟರೂ ಗೊಣಗದೆ ಚಿಲ್ಲರೆ ಕೊಡುವ ಕಂಡಕ್ಟರ್‌ಗಳು, ಎಲ್ಲರೂ ಇಳಿಯುವವರೆಗೂ ಬಸ್ ನಿಲ್ಲಿಸುವ ತಾಳ್ಮೆ ಇರುವ ಚಾಲಕರು, ಮದರಾಸಿನ ಈಸಾರಿಗೆ ವ್ಯವಸ್ಥೆ ಒಂದು ರೀತಿಯ ಇನ್‌ಫೀರಿಯಾರಿಟಿ ಕಾಂಪ್ಲೆಕ್ಸ್ ಹುಟ್ಟಿಸಿತ್ತು. ಧರಣಿ ಮಂಡಲ ಮಧ್ಯದಲ್ಲಿ ಮೆರೆಯುವ ಕರ್ನಾಟಕ ದೇಶದ, ಮಾದರಿ ಮೈಸೂರಿನವರು ತಲೆ ತಗ್ಗಿಸುವಂತೆ ಈ ಜನ ಬಸ್ ಓಡಿಸುತ್ತಾರಲ್ಲ ಎನ್ನುವ ಕಿರಿಕಿರಿ. ಅದರಲ್ಲೂ ಒಂಬತ್ತು ವರ್ಷ ದಿನಕ್ಕೆ ಸರಾಸರಿ ಎರಡು ಸಾರಿ ಎಂದರೆ ಒಟ್ಟು ಏಳು ಸಾವಿರ ಸಾರಿ ಬಸ್‌ನಲ್ಲಿ ಹೋಗಿದ್ದರೂ ಒಂದೇ ಒಂದು ಕಂಡಕ್ಟರ್ ಹಣ ತೆಗೆದುಕೊಂಡು ಟಿಕೆಟ್ ಕೊಡದ ಪ್ರಸಂಗ ಕಂಡಿಲ್ಲವಾಗ, ಮಧ್ಯೆ ಒಂದೆರಡು ದಿನ ಬೆಂಗಳೂರಿಗೆ ಹೋದರೆ ಅಲ್ಲಿ ಹೋದ ಬಸ್ಸಿನಲ್ಲೆಲ್ಲಾ ಒಂಬೆರಡಾದರೂ ಇಂತಹ ಘಟನೆ ಕಂಡಾಗ ಈ ಕಾಂಪ್ಲೆಕ್ಸ್ ಇನ್ನೂ ಹೆಚ್ಚಾಗುತ್ತಿತ್ತು.

ಈಗ ರಾಷ್ಟ್ರದ ರಾಜಧಾನಿ ದೆಹಲಿಗೆ ಬಂದ ಕೂಡಲೆ ಈ ಖಾಯಿಲೆ ಗುಣವಾಗಿ ಯಾವುದೇ ಸ್ಟಾಪಿನಲ್ಲಿ ಎಷ್ಟು ಜನ ಹತ್ತಲಿ. ಎಷ್ಟು ಜನ ಇಳಿಯಲಿ ಹತ್ತು ಸೆಕೆಂಡಿಗಿಂತ ಹೆಚ್ಚು ಹೊತ್ತು ನಿಲ್ಲಿಸುವುದಿಲ್ಲ ಎಂದು ಪಣ ತೊಟ್ಟಿರುವ ಚಾಲಕರು, ಪ್ರಯಾಣಿಕರನ್ನು ಹರಿಯಾಣದ ಜಾಟ್ ಶೈಲಿಯಲ್ಲಿ. ಹಿಮಾಲಯದ ಘಾಟ್- ಶೈಲಿಯಲ್ಲಿ, ಪಂಜಾಬಿಯ ಆಯ್ದ ನುಡಿಗಳಲ್ಲಿ, ಗಡವಾಲದ ಶಕ್ತಿಶಾಲಿ ಬನಿಯಲ್ಲಿ ಹೀನಾಯವಾಗಿ ಬಯ್ಯುವ ಕಂಡಕ್ಟರ್‌ಗಳು. ಘಂಟೆಗಟ್ಟಲೆ ಒಂದೂ ಬಸ್ಸಿಲ್ಲದೆ ಅನಂತರ ಒಂದೇ ರೂಟಿನ ಹಿಂಡು ಹಿಂಡು ಬಸ್ಸುಗಳು ಬರುವ ಪ್ರಸಂಗಗಳು. ಆಹಾ ! ಆಹಾ ! ಬೆಂಗಳೂರು ನಗರ ಸಾರಿಗೆ ಎಷ್ಟು ಉತ್ತಮ ಎನ್ನುವಂತೆ ತೋರಿಸುತ್ತಿದೆ.

* * *

ಇಂದಿನ ವಿದ್ಯಾರ್ಥಿ ನಾಳೆಯ ಪ್ರಜೆ ಎಂದು ಹೇಳತ್ತಿದ್ದ ಒಂದು ಕಾಲವಿತ್ತಂತೆ. ಆದರೆ ದೇಹಲಿ ವಿಶ್ವವಿದ್ಯಾನಿಲಯದ ಇಂದಿನ ವಿದ್ಯಾರ್ಥಿ ಇಂದಿನ ನಾಯಕರನ್ನೇ ವೀರಿಸುತ್ತಾನೆ. ಮೊನ್ನೆ ನಡೆದ ಯೂನಿಯನ್ ಚುನಾವಣೆಗೆ

ರಾಷ್ಟ್ರದ ಎರಡು ಪ್ರಮುಖ ಪಕ್ಷಗಳ ನಡುವೆ ನೇರ ಪೈಪೋಟಿ. ರಾಜಧಾನಿಯ ಎಲ್ಲಾ ಪತ್ರಿಕೆಗಳಲ್ಲೂ ದೊಡ್ಡ ದೊಡ್ಡ ಜಾಹೀರಾತುಗಳು, ನಗರದ ಬೀದಿಬೀದಿಗಳಲ್ಲಿ ಪೋಸ್ಟರ್‌ಗಳು, ಕ್ಯಾಂಪಸ್ ತುಂಬುವಷ್ಟು ಕರಪತ್ರಗಳು, ಮೆಟಡಾರ್, ಕಾರುಗಳಲ್ಲಿ ಭರದಿಂದ ಪ್ರಚಾರ. ಒಂದು ಪತ್ರಿಕೆಯ ಪ್ರಕಾರ ಒಬ್ಬೊಬ್ಬ ಅಭ್ಯರ್ಥಿ ಆರು ಲಕ್ಷ ಖರ್ಚು ಮಾಡಿದ್ದೇನೆ ಎಂದು ಒಪ್ಪಿಕೊಳ್ಳುತ್ತಾರೆ. ಆದರೆ ನಿಜವಾದ ಖರ್ಚು ಐದರಷ್ಟಾದರೂ ಇರಬೇಕು ಎಂದು ಹೇಳಿದೆ. ಒಂದು ಯೂನಿಯನ್ ಎಲೆಕ್ಷನ್ನಿಗೆ ಮೂವತ್ತು ಲಕ್ಷ ಖರ್ಚು ಮಾಡುವುದಾದರೆ ಎಂತಹ ಪ್ರಗತಿ, ಭಾರತ ಮಾತೆ ನೀನು ಧನ್ಯ, ಧನ್ಯೆ ಎಂದು ಕುಣಿದಾಡಬೇಕೆನ್ನಿಸುತ್ತದೆ.

'ಕೆಲವಂ ಮಾಳ್ಪವರಿಂದ ಕಂಡು... ಎಂದು ಸೋಮೇಶ್ವರ ಶತಕದ ಕವಿ ಹೇಳಿದ್ದಾನೆ. ಮಾಳ್ಪವರು ಕಾಣದಷ್ಟು ದೂರವಿರುವುದರಿಂದ ಈ ಮೂಲಕ ಖಾಸಗಿ ಶಾಲೆಗಳನ್ನು ನಡೆಸುವವರಿಗೆ ಒಂದು ಹಿತನುಡಿ. ಬರೀ ಫೀಸು. ಡೊನೇಷನ್, ಪುಸ್ತಕದಲ್ಲಿ ಕಮಿಷನ್, ಯೂನಿಫಾರಂನ ಬಟ್ಟೆಯಲ್ಲಿ ಕಿಕ್‌ಬ್ಯಾಕ್, ಸ್ಕೂಲ್ ಬಸ್ ಕಂಟ್ರಾಕ್ಟರ್‌ನಿಂದ ಪರ್ಸೆಂಟೇಜ್ ಇಷ್ಟರಿಂದಲೇ ತೃಪ್ತರಾಗಿರುವ ನಿಮಗೆ ಇನ್ನಷ್ಟು ಹಣ ಗಳಿಸಲು ಒಂದು ಹೊಸ ಮಾರ್ಗ. ದೆಹಲಿಯ ಪಬ್ಲಿಕ್ ಸ್ಕೂಲೊಂದು (ಇಲ್ಲಿ ಪ್ರೈವೇಟ್ ಸ್ಕೂಲುಗಳಿಗೆ ಪಬ್ಲಿಕ್ ಸ್ಕೂಲ್ ಎಂದು ಹೇಳುತ್ತಾರೆ !) ಹತ್ತು, ಹನ್ನೆರಡನೆ ತರಗತಿಯವರಿಗೆ ಪರೀಕ್ಷೆ ನಡೆಸಿತು. ಆ ಪರೀಕ್ಷೆಯಲ್ಲಿ ಫೇಲಾದ ಹುಡುಗ/ಹುಡುಗಿಯರ ತಂದೆತಾಯಿಯರಿಗೆ ಫೇಲಾದ ಒಂದೊಂದು ವಿಷಯಕ್ಕೆ ನೂರು ರೂಪಾಯಿ ಜುಲ್ಮಾನೆ—ನೀವು ಮಕ್ಕಳ ಶಿಕ್ಷಣಕ್ಕೆ ಗಮನ ಕೊಡುತ್ತಿಲ್ಲ ಎಂದು. ಪರೀಕ್ಷೆಯ ಪತ್ರಿಕೆಗಳು ಸಾಕಷ್ಟು ಕಠಿಣವಾಗಿದ್ದರಿಂದ ಹೆಚ್ಚು ಕಡಿಮೆ ಎಲ್ಲಾ ಹುಡುಗರೂ ಸಾಕಷ್ಟು ಜುಲ್ಮಾನೆ ಕೊಟ್ಟರಂತೆ.

(ಬೆಂಗಳೂರು) ನೆಗಡಿ !

—ವಿಕಟಕವಿ

ಜುಗಳ ವರ್ಷ ಧಾರೆ
ಮೂಗಿನಿಂದ ಸೋರೆ,
ಕುಪಿತ ನವಿಲು ನನ್ನ ಮನಂ
ಪ್ರವಾಹ ಉಕ್ಕಿ ಮೀರೆ ! ೧

ಹಸರು ಬಯಲ ಮೇಲೆ.
ಹುಲ್ಲುಗರಿಕೆ ನೋಡೆ,
ಅಲರ್ಜಿ ಸಮರದಿಂದ ನನ್ನ
ಮೊಗದಿ ಕೆಂಪು ಮೂಡೆ ! ೨

ತಲೆಯ ಕೂದಲೆಲ್ಲ ಕೆದರಿ
ಕೈವಸ್ತ್ರವು ನೆನೆದು ಮುದುರಿ
ಸೀನುಗಳಾ ಆರ್ಭಟದಿಂ
ಮನೆಯ ಮಂದಿಯೆಲ್ಲ ಬೆದರಿ! ೩

ಓಡು ಓಡು ಓಡು
ಡಾಕ್ಟರ ಬಳಿಕೋಡು.
ವೈದ್ಯಹರಿಗೆ ಕಾಯುತ್ತಿಹ
ಎಲ್ಲರದು ಅದೆ ಪಾಡು ! ೪

(ಕುವೆಂಪು ಅವರ ಕ್ಷಮೆ ಬೇಡಿ.)

ಮಾನನಷ್ಟ ಕಾಯಿದೆಯ ಅನಂತರ

—ಆರತಿ

ಪ್ರತಿಯೊಬ್ಬ ಭಾರತೀಯನ ಮಾನ ಮರ್ಯಾದೆ ಈಗ ಸುರಕ್ಷಿತವಾಗಿದೆ. ದುರುಳ ಪತ್ರಿಕೋದ್ಯಮಿಗಳ ಬೇಜವಾಬ್ದಾರಿ ಬರಹಗಳಲ್ಲಿ ಹೀನಾಮಾನವಾಗಿ ನಿಂದಿಸಲ್ಪಟ್ಟು, ಇನ್ನು ಮೇಲೆ ಯಾರೂ ಮಾನಸಿಕ ಯಾತನೆಗೆ ಒಳಗಾಗ ಬೇಕಾಗಿಲ್ಲ. ಈ ಕ್ರಾಂತಿಕಾರಕ ಕಾಯಿದೆ, ಅನೇಕ ಸತ್ಪ್ರಜೆಗಳ ಕೊಂಡಾಟಕ್ಕೆ ಪಾತ್ರವಾಗಿದೆ. ಈ ಕಾಯಿಂದೆ ಜಾರಿಗೆ ಬಂದಂದಿನಿಂದ, ಅನೇಕ ನಿರಪರಾಧಿ ಗಣ್ಯರು ನಿರಾಳವಾಗಿ ಉಸಿರಾಡುವಂತಾಗಿದೆ. ಇತ್ತೀಚಿನ ಹಲವು ಸುದ್ದಿ ಶೀರ್ಷಿಕೆಗಳು ಈ ಬಗ್ಗೆ ಜೀವಂತ ಸಾಕ್ಷಿಯಾಗಿವೆ.

೧. "ಒಂದು ಚೆಂಬು ಹಾಲು ಕುಡಿದೆ"—ವಿನ್ ಚಡ್ಡಾ

"ನಿಷ್ಕಾರಣವಾಗಿ ನನ್ನನ್ನು ಪತ್ರಿಕೆಗಳಲ್ಲಿ ನಿಂದಿಸಲು ಪ್ರಾರಂಭಿಸಿದಾಗಿನಿಂದ ನನಗೆ ಸರಿಯಾಗಿ ನಿದ್ದೆ ಸಹಾ ಬಂದಿರಲಿಲ್ಲ, ದಿನಕ್ಕೆರಡು ಬಾರಿ ಕಾಂಪೋಸ್ ನುಂಗ ಬೇಕಾಗಿತ್ತು. ಸದ್ಯ ಈ ಹೊಸ ಕಾಯಿದೆ ಜಾರಿಗೆ ಬಂದು ನಾಲ್ಕು ನೀಚ ಪತ್ರಿಕೋದ್ಯಮಿಗಳನ್ನು ಗಲ್ಲಿಗೇರಿಸಿದಂದಿನಿಂದ ನಿದ್ದೆ ಚೆನ್ನಾಗಿ ಬರುತ್ತಿದೆ. ನಿನ್ನೆ ತಾನೆ ಒಂದು ಚೆಂಬು ಹಾಲು ಕುಡಿದೆ" ಎನ್ನುತ್ತಾರೆ ಖ್ಯಾತ ದೇಶಪ್ರೇಮಿ ಹಾಗೂ ಉದ್ಯಮಿ ವಿನ್ ಚಡ್ಡಾ. ಚಡ್ಡಾ ಅವರ ವ್ಯವಹಾರ ಜ್ಞಾನ ಹಾಗೂ ಹೋಟೆಲ್ ಕೊಠಡಿಗಳನ್ನು ಮುಂಗಡವಾಗಿ ಕಾದಿರಿಸುವ ಕೆಲಸದಲ್ಲಿ ಅವರು ತೋರಿರುವ ಪರಿಣತೆಯಿಂದಾಗಿ, ನಮ್ಮ ದೇಶಕ್ಕೆ ಎಣೆಯಿಲ್ಲದಂತಹ ಬೋಫೋರ್ಸ್ ಬಂದೂಕುಗಳು ದೊರೆತುದನ್ನು ಇಲ್ಲಿ ಸ್ಮರಿಸಬಹುದು.

"ರೂಪಾಯಿ ನಾಣ್ಯಕ್ಕಿಂತ ತೂಕ ಜಾಸ್ತಿ"—ಶಾಮ್‌ಸಿಂಗ್

ವಿನ್ ಚಡ್ಡಾ ಅವರ ಮನೆಗೆ ಹಾಲು ಸರಬರಾಜು ಮಾಡುವ ಶಾಮ್ ಸಿಂಗ್ ಪ್ರಕಾರ, ತಿಂಗಳ ಹಾಲಿನ ಲೆಕ್ಕವನ್ನು ಚುಕ್ತಾ ಮಾಡುವಾಗ ಚಡ್ಡಾ ಅವರು ಒಂದು ತೀರಾ ಹೊಸ ನಮೂನೆಯ ನಾಣ್ಯಗಳನ್ನಿತ್ತರಂತೆ. "ಈ ಥಳ ಥಳ ಹೊಳೆಯುತ್ತಿದ್ದ ಹೊಸ ನಾಣ್ಯಗಳು ರೂಪಾಯಿಗಿಂತ ಭಾರವಾಗಿದ್ದವು. ಬ್ಯಾಂಕ್‌ನಲ್ಲಿ ಕೇಳಿದರೆ ಅದನ್ನ ಕ್ರಾನರ್ ಅಂತಲೋ ಕ್ರೋನರ್ ಅಂತಲೊ ಕರೆದರು" ಎನ್ನುತ್ತಾನೆ ಶಾಮಸಿಂಗ್.

ದೆಹಲಿಯು ರಣಬಿಸಿಲಿಗೆ ಶೀತಲ ಶಿಲೆ

ದೆಹಲಿಯ ಬೇಸಿಗೆಯ ಬವಣೆ ಯಾರಿಗೆ ತಿಳಿದಿಲ್ಲ. ಆದರೆ ಈ ಬಿಸಿಲಿನ ಬೇಗೆಯಿಂದ ಪಾರಾಗುವ ಬಗೆ ಮಾತ್ರ ಎಲ್ಲರಿಗೂ ಹೊಳೆಯುವ ವಿಷಯವಲ್ಲ. ಅದಕ್ಕೆ ಕ್ಯಾಪ್ಟನ್ ಸತೀಶ್ ಶರ್ಮ ಅವರಂತಹ ತೀಕ್ಷ್ಣ ಮತಿ ವಿಮಾನ ಚಾಲಕರೇ ಬೇಕು. ಪಾಪ ! ರಣ ಬಿಸಿಲಿನಲ್ಲಿ ಬೇಯುತ್ತಿದ್ದ ಕ್ಯಾ!! ಶರ್ಮ ಮತ್ತು ಅವರ ಕುಟುಂಬವರ್ಗ ತಮ್ಮ ಸ್ವಂತ ಮನೆಯಲ್ಲಿ ಒಂದು ಪುಟ್ಟ ಈಜು ಕೊಳ ನಿರ್ಮಿಸಿದ್ದು, ನಮ್ಮ ದುರುಳ ಪತ್ರಿಕೋದ್ಯಮಿಗಳಿಗೆ ಮಹಾ ಪಾತಕವಾಗಿ ಕಂಡಿರಬೇಕು. ಈಜು ಕೊಳದ ನಿರ್ಮಾಣಕ್ಕೆ ಇಟಲಿಯ ಅಮೃತ ಶಿಲೆಯನ್ನು ಬಳಸಿರುವರೆಂದು ಈ ನೀಚರ ಆರೋಪ. ಇಟಲಿಯ ಅಮೃತ ಶಿಲೆಯ ತಣ್ಪು ಜಬ್ಬಲ್‌ಪುರದ ಶಿಲೆಗೆ ಬರುವುದಿಲ್ಲವೆಂದು ಆ ಅಜ್ಞಾನಿಗಳಿಗೆ ಹೇಗೆ ತಿಳಿಯಬೇಕು ?

ಚಿಂತೆ ಇಲ್ಲ. ಇನ್ನು ಮೇಲಾದರೂ ಕ್ಯಾ!! ಶರ್ಮ ತಮ್ಮ ಬಂಧು ಬಾಂಧವರೊಡನೆ ಶಾಂತಿಯಿಂದ ಈಜಾಡಿ, ಅಮೃತ ಶಿಲೆಯ ಮೇಲೆ ಹಾಯಾಗಿ ವಿಶ್ರಮಿಸಬಹುದು. ಅವರನ್ನು ಟೀಕಿಸಲು ಉದ್ಯುಕ್ತರಾಗಿದ್ದ ಪತ್ರಿಕರ್ತರೆಲ್ಲರೂ ಇಷ್ಟರಲ್ಲಾಗಲೇ ವೈತರಣಿ ದಾಟಿ ಯಮಲೋಕ ಮುಟ್ಟಿರಬಹುದು. ಅಲ್ಲಿ, ಕುದಿಯುವ ಎಣ್ಣೆ ಕಡಾಯಿಯಲ್ಲಿ ಕುಳಿತು, "ಅಮೃತ ಶಿಲೆ ಅನಾವಶ್ಯಕ" ಅಂತ ಯಾವ ಬಾಯಲ್ಲಿ ಹೇಳುತ್ತಾರೋ ನೋಡೋಣ !

"ಪುನರ್ಜನದಲ್ಲಿ ಪೂರ್ಣ ನಂಬಿಕೆ"-

—ಸ್ನಾಮ್ ಪ್ರೊಜೆಟ್ಟಿ ಅಧ್ಯಕ್ಷರು.

ಇಟಲಿಯ ಖ್ಯಾತ ಸಂಸ್ಥೆ ಸ್ನಾಮ್ ಪ್ರೊಜೆಟ್ಟಿಯ ಅಧ್ಯಕ್ಷರ ಹೇಳಿಕೆಯಂತೆ ಆ ಸಂಸ್ಥೆಯ ಆಡಳಿತ ವರ್ಗದವರೆಲ್ಲರಿಗೂ ಪುನರ್ಜನ್ಮದಲ್ಲಿ ಪೂರ್ಣ ವಿಶ್ವಾಸವಿದೆಯಂತೆ. "ನಾವೆಲ್ಲಾ ಹಿಂದಿನ ಜನ್ಮದಲ್ಲಿ ಭಾರತೀಯರಾಗಿದ್ದು ಖಂಡಿತ" ಎನ್ನುತ್ತಾರೆ, ಕಂಪೆನಿಯ ವಕ್ತಾರರೊಬ್ಬರು.

"ಈ ಒಂದು ಜನ್ಮಾಂತ ಬಾಂಧವ್ಯದಿಂದ ನಿಮ್ಮ ದೇಶದಲ್ಲಿ H. B .J. ಅನಿಲ ಕೊಳವೆಗಳನ್ನು ಜೋಡಿಸಲು ಉತ್ಸುಕರಾಗಿದ್ದು ನಿಜ. ಅಷ್ಟಕ್ಕೇ ನಿಮ್ಮ ಪತ್ರಕರ್ತರೇಕೆ ಉರಿದು ಬೀಳಬೇಕು ?. ದೈವ ಕೃಪೆಯಿಂದ ಭಾರತ ಪ್ರಗತಿಶೀಲ ರಾಷ್ಟ್ರ. ನಮ್ಮನ್ನು ನಿಂದಿಸಿದ ಪತ್ರಿಕೋದ್ಯಮಿಗಳನ್ನು ಅವರೇನು ಸುಮ್ಮನೆ ಬಿಟ್ಟಿಲ್ಲ. ಪ್ರತಿಯೊಬ್ಬನಿಗೂ ಜೀವಾವಧಿ ಕಾರಾಗೃಹ ವಾಸ. ನ್ಯಾಯ ದೇವತೆ, ನಮ್ಮ ಪೂರ್ವ ಜನ್ಮದ ತಾಯ್ನಾಡಾದ ಭಾರತ ದಲ್ಲಿ ತಾಂಡವಾಡುತ್ತಿದ್ದಾಳೆ ಎಂಬುದಕ್ಕೆ ಇದಕ್ಕಿಂತ ಹೆಚ್ಚಿನ ನಿದರ್ಶನ ಬೇಕೆ ? " ಎಂದು ಕೇಳುತ್ತಾರೆ ಪ್ರೊಜೆಟ್ಟಿ ಅವರು (ಅಥವಾ ಸ್ಯಾಮ್ ಅವರು)

"ಮಾಡಬಾರದ್ದು ಮಾಡಿದರೆ ಆಗ ಬಾರದ್ದು ಆಗಲೇಬೇಕು" – ದೇವಾನಂದಾನಿ

ಖ್ಯಾತ ಉದ್ಯಮಿ ದೇವಾನಂದಾನಿ ಅವರ ಕಛೇರಿ, ಭವ್ಯವಾದ ರೇವ ಜಿತು ಕಟ್ಟಡದ ಹದಿನೈದನೆಯ ಮಹಡಿಯಲ್ಲಿ. ವಿಶಾಲವಾದ ಕಛೇರಿಯ ವಿಶಾಲವಾದ ಕಿಟಕಿಯ ಮೂಲಕ ಜಯನಗರದ ಮುಖ್ಯ ರಸ್ತೆಯ ವಾಹನ ಸಂಚಾರ ಇರುವೆಗಳಂತೆ ಸಾಗಿತ್ತು.

"ಕೆಲವೇ ವರ್ಷಗಳ ಹಿಂದೆ ಪತ್ರಿಕೋದ್ಯಮಿಗಳನ್ನು ಮಾನನಷ್ಟ ಕಾಯಿದೆಯ ಪ್ರಕಾರ ಶಿಕ್ಷಿಸದೇ ಬಿಟ್ಟಿದ್ದರೆ, ನಾವು ಇಲ್ಲಿ ಕುಳಿತು ಮಾತ ನಾಡಲು ಆಗುತ್ತಿತ್ತೇ ?" ಸಿಗಾರ್ ಹಚ್ಚುತ್ತಾ, ದೇವನಂದಾನಿ ಕೇಳಿದರು. "ಅಂದು ಇದೇ ನೆಲದ ಮೇಲೆ ಧರಣಿ ಹೂಡಿ, ನಮ್ಮ ಧುರೀಣ ಹೆಗಡೆ ಅವರಿಗೆ ಅಪಚಾರ ಮಾಡಿದ ಪತ್ರಕರ್ತರೆಲ್ಲಾ ಎಲ್ಲಿದ್ದಾರೆ ಗೊತ್ತೇ? "ಸೆಂಟ್ರಲ್ ಜೈಲಿನಲ್ಲಿ" ಜಂಬಾ ಒಬ್ಬ ಬೀಗುತ್ತಾ ಹೇಳಿದ. ಮಿನಿ ಸಂದರ್ಶನ ಮುಗಿಸಿ ನಾವು ಹೊರಬಂದೆವು.

ಪಿ. ಜೆ. ಗಳ ಅದ್ಭುತಲೋಕ

—ಎಂ. ಎಸ್. ಶ್ರೀರಾಮ್

ಹೈದರಾಬಾದಿನಲ್ಲಿ ಕೆಲ ವರ್ಷಗಳ ಹಿಂದೆ ವಿಶ್ವ ಹಾಸ್ಯ ಸಮ್ಮೇಳನ ನಡೆಯಿತು. ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದು ಆಂಧ್ರದ ಮಂತ್ರಿಯೊಬ್ಬರು. ಹಾಸ್ಯ ಸಮ್ಮೇಳನಕ್ಕೆ ಹಾಸ್ಯಗಾರರನ್ನು ಬಿಟ್ಟು ಹಾಸ್ಯ ವಸ್ತುವನ್ನೇಕೆ ಕರೆಸಿದ್ದೆಂದು ಹುಬ್ಬೇರಿಸಬಹುದು. ಬಹುಶಃ ಇದೊಂದು ಪಿ. ಜೆ. ಆಗಲಿ ಎಂದು ನಿಯೋಜಕರ ಉದ್ದೇಶವಿದ್ದೀತೆ ? ಹೌದು... ಪಿ. ಜೆ. ಎಂದರೇನು ?... ಒಳ್ಳೆಯ ಜೋಕನ್ನು ಹೇಳಲು ಎಲ್ಲರಿಗೂ ಒಂದಲ್ಲಾ ಒಂದು ಹಂತದಲ್ಲಿ ಸಾಧ್ಯವಿದ್ದೀತು...ಆದರೆ ಪಿ. ಜೆ. ??

ಇಂಗ್ಲಿಷಿನ ಪೂರ್ ಜೋಕ್ ಎಂಬುದಕ್ಕೆ ಜೆಟ್ ಯುಗದ ಅಬ್ರಿವಿಯೇಟೆಡ್ ಫಾರಮ್ಮೇ ಪಿ. ಜೆ. ಹಾಸ್ಯ ಸಮ್ಮೇಳನಕ್ಕೆ ಮುಖ್ಯ ಮಂತ್ರಿಗಳನ್ನು ಕರೆಸಿದ್ದರೆ ಅದೊಂದು ಜೋಕಾಗುತ್ತಿತ್ತೇನೋ... ಆದರೆ ಬರೇ ಮಂತ್ರಿಗಳನ್ನು ಕರೆಸಿದ್ದು ಪೂರ್ ಜೋಕ್ ಅಲ್ಲದೆ ಇನ್ನೇನು ?? ಇಲ್ಲಿ ನಾನು ಮಂತ್ರಿಗಳ ಪ್ರಸ್ತಾಪ ಮಾಡುತ್ತಿರುವುದಕ್ಕೆ ಒಂದು ಸ್ಪಷ್ಟ ಕಾರಣ ಇದ್ದೇ ಇದೆ. ಸಮ್ಮೇಳನವನ್ನು ಆಧ್ಯಕ್ಷೀಕರಿಸುತ್ತಾ, ಮಂತ್ರಿಗಳು ಬಹಳ ಗಂಭೀರ ದನಿಯಲ್ಲಿ "ಹಾಸ್ಯ ಅನ್ನುವುದು ಬಹಳ ಗಂಭೀರ ವಿಷಯ. ಅದನ್ನು ಲಘುವಾಗಿ ಪರಿಗಣಿಸುವುದು ತರವಲ್ಲ" ಎಂದು ಹೇಳಿದ್ದರು. ಜೋಕೊಂದು ಅತ್ಯಂತ ಯಶಸ್ವಿ ಆಗಬೇಕಾದರೆ ಅದನ್ನು ತುಂಬಾ ಗಂಭೀರವಾದ ದನಿಯಲ್ಲಿ ಹೇಳಬೇಕೆಂದು ಮಾರ್ಕ್ ಟ್ವೇನ್ ಹೇಳುತ್ತಾನೆ. ಮಂತ್ರಿಗಳು ಮಾರ್ಕ್‌ಟ್ವೇನನ್ನು ಓದಿದ್ದರೆ ?... ಮಂತ್ರಿಗಳು ಅಂಡ್ ಮಾರ್ಕ್‌ಟ್ವೇನ್ ಇದೂ ಒಂದು ಪಿ. ಜೆ. ಅಲ್ಲವೇ ? ಮಂತ್ರಿಗಳು ಸೀರಿಯಸ್ಸಾಗಿ ಹೇಳಿದ ವಿಚಾರವನ್ನು ಯಾರೂ ಸೀರಿಯಸ್ಸಾಗಿ ಪರಿಗಣಿಸಲಿಲ್ಲವಾದ್ದರಿಂದ ಯಾರೂ ನಗಲಿಲ್ಲ. ಹಾಸ್ಯಗಾರರ ದುರಂತವೇ ಅದು ! !

ಇರಲಿ... ಈಗ ಪಿ.ಜೆ.ಗಳ ವಿಷಯಕ್ಕೆ ಬಂದು ಅದನ್ನು ಗಂಭೀರವಾಗಿ ಚರ್ಚಿಸೋಣ. ಪಿ.ಜೆ.ಗಳೂ ಇಂಥ ದುರಂತಕ್ಕೆ ಒಳಗಾದ ಜೋಕುಗಳೇ—ಕೇಳಿದಾಕ್ಷಣಕ್ಕೆ ಯಾರೂ ನಗುವುದಿಲ್ಲ. ಬದಲಿಗೆ ಕೋಪ ನಟಿಸಿಯಾರು ನಿಮ್ಮ ಅದೃಷ್ಟವೂ ನಿಮ್ಮ ಜೋಕಿನಷ್ಟೇ ಪೂರಾಗಿದ್ದಲ್ಲಿ ಒಂದೆರಡು ಏಟು ಬಿದ್ದರೂ

ಆಶ್ಚರ್ಯಪಡಬೇಕಿಲ್ಲ. ಉದಾಹರಣೆಗೆ ಯಾರನ್ನಾದರೂ ಈ ಪ್ರಶ್ನೆ ಕೇಳಿ : "ಆನೆಯೊಂದು ಸೂಜಿ ಕಣ್ಣಿಂದ ಹಾಯ್ದು ಹೋಗುವುದನ್ನು ತಪ್ಪಿಸಲು ಏನು ಮಾಡಬೇಕು ?" ನಿಮಗೆ ಚಿತ್ರ ವಿಚಿತ್ರ ಉತ್ತರಗಳು ದೊರತಾವು. ಎದುರು ನಿಂತವರು ಉತ್ತರ ತಿಳಿಯದೆ ಕಂಗಾಲಾದಾರು. ನಿಮ್ಮನ್ನು ಉತ್ತರಕ್ಕೆಂದು ಪೀಡಿಸಿದಾಗ ನಿಧಾನವಾಗಿ ಹೇಳಿ– "ಅದರ ಬಾಲಕ್ಕೆ ಗಂಟು ಹಾಕಿದರಾಯ್ತಪ್ಪ". ನಿಮ್ಮ ಉತ್ತರ ಕೇಳಿ ಎದುರಿಗಿದ್ದವರು ನಕ್ಕಾರೆಯೇ ?... ಇಲ್ಲ...ಇಲ್ಲ. ಸಾಧ್ಯವಾದರೆ ತಮ್ಮ ಹಣೆ ಚಚ್ಚಿಕೊಳ್ಳುತ್ತಾರೆ. ಧೈರ್ಯವಿದ್ದರೆ ನಿಮ್ಮನ್ನು ಬರೇ ಚಚ್ಚುತ್ತಾರೆ.

ನದಿ ಮೂಲ ಋಷಿ ಮೂಲದಂತೆಯೇ ಜೋಕು ಮೂಲದ ಬಗೆಗೂ ತಲೆ ಕೆಡಿಸಿಕೊಳ್ಳಬಾರದೆಂಬುದು ನಾಣ್ನುಡಿ. ಆ ಕ್ಷಣಕ್ಕೆ ಖುಷಿ ಕೊಟ್ಟರೆ...ಕೊಟ್ಟವನೇ ಮೂಲ ! ಹಾಗೆಯೇ ಪಿ.ಜೆ.ಗಳ ಉಗಮದ ಬಗ್ಗೆ ಬಗೆಯುವುದು ಸಲ್ಲ. ಆದರೆ ಅವು ವಿಪುಲವಾಗಿ ಬೆಳೆಯುವ ಸ್ಥಳಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಒಂದು : ಕಾಲೇಜು ಕ್ಯಾಂಪಸ್ಸುಗಳಲ್ಲಿ... ಎರಡು : ತಮಿಳು ಪತ್ರಿಕೆಗಳಲ್ಲಿ. ಜೋಕಿಗಾಗಿಯಾದರೂ ತಮ್ಮ ದ್ರಾವಿಡ ಸಂಸ್ಕೃತಿಯನ್ನು ಬಿಟ್ಟುಕೊಡದ ಶೋಕಿಯುಳ್ಳ ತಮಿಳರು ಇದಕ್ಕೆ "ಅರುವೈ ಜೋಕ್ಸ್" ಎಂದು ನಾಮಕರಣ ಮಾಡಿದ್ದಾರೆ. ಅದಕ್ಕೆ ಪತ್ರಿಕೆಗಳಲ್ಲಿ ಬ್ಲೇಡಿನ ಚಿಹ್ನೆಯನ್ನೂ ಕೊಡಲಾಗಿದೆ.

ಒಂದು ಪತ್ರಿಕೆಯಂತೂ ಸಿಗರೇಟಿನ ಜಾಹೀರಾತಿನಲ್ಲಿ ಕೊಡುವುದರ ಹಾಗೆ ವಾರ್ನಿಂಗ್ ಕೂಡಾ ಕೊಡುತ್ತದೆ– ಪುಟ ತೆರೆಯುವಾಗ ಜಾಗರೂಕರಾಗಿರಿ... ಪುಟ ಹರಿದರೆ ನಮ್ಮನ್ನು ದೂರಬೇಡಿ– ಯಾಕೆ ಹೀಗೆಂದು ಅರಿಯದೇ ಕಣ್ಕಣ್ಣು ಬಿಡುವ ನಮ್ಮಂತಹ ಮೂರ್ಖ ಓದುಗರಿಗೆ ಅರಿವಾಗಲೋ ಎಂಬಂತೆ ಅವರು ಸೂಚನೆ ಮುಂದುವರೆಸುತ್ತಾರೆ....ಒಳಗೆ ಬ್ಲೇಡುಗಳಿವೆ... ಪುಟ ಕತ್ತರಿಸಿ ಹೋದೀತು.

ಪಿ.ಜೆ.ಗಳಿಗೆ ಆನೆಯಿಂದ ಹಿಡಿದು ಖಾಲಿಸ್ಥಾನದ ವರೆಗೆ ಯಾವ ವಸ್ತುವಾದರೂ ಅಡ್ಡಿಯಿಲ್ಲ. ನಮ್ಮ ಕಾಲೇಜಿನಲ್ಲಿ ಧಡಿಯನೊಬ್ಬನನ್ನು ಜೋಕೆಂದು, ಸಣಕಲನೊಬ್ಬನನ್ನು ಪಿ. ಜೆ. ಎಂದೂ ಕರೆಯುತ್ತಿದ್ದರು. ಕಾರಣ ನನಗಂತೂ ಬಹಳ ದಿನ ತಿಳಿದೇ ಇರಲಿಲ್ಲ. ಕಡೆಗೊಂದು ದಿನ ಕೇಳಿಯೇ ಬಿಟ್ಟೆ "ಯಾಕೆ ಗುರು ಹೀಗೆ ?" ಛಟ್ಟನೆ ಉತ್ತರ ಬಂತು: "ಇಬ್ಬರೂ ಏಪ್ರಿಲ್ ಒಂದರಂದು ಹುಟ್ಟಿದ್ದಾರೋ... ಅದರಲ್ಲೊಬ್ಬ ಬಡಕಲ ಬೇರೆ !"

ಖಾಲಿಸ್ಥಾನದ ಪಿ.ಜೆ.ಗಳು ಸರದಾರಜೀ ಮಿಶ್ರರನ್ನೂ ಒಳಗೊಂಡು ಎಲ್ಲರೂ ಖುಷಿಪಡುವಂತಹ ಖಾಲಿಸ್ಥಾನದ ಸಮಸ್ಯೆ ಏಕೆ ಬಗೆಹರಿಯುದಿಲ್ಲ ? ಏಕೆಂದರೆ ಅದು ಬಹಳ ಸಿಕ್ (sick) ಪ್ರಾಬ್ಲಮ್ ಅಥವಾ ನಾವುಗಳು ಸಿಕ್ಕು ಸಿಕ್ಕಾದ ಸಮಸ್ಯೆ ಎನ್ನಬಹುದೇ ? ಖಾಲಿಸ್ಥಾನ ಎಲ್ಲಿದೆ ? ಎಂದಾಗ ಸರ್ದಾರ್ಜಿ ಒಬ್ಬ ಹೆಮ್ಮೆಯಿಂದ ತಲೆ ತೋರಿಸಿ ಹೇಳಿದನಂತೆ "ಇಲ್ಲಿದೆ !" ಖಾಲಿಸ್ಥಾನದ ಬಗೆಗೆ ಇರುವ ಇತರ ಜೋಕುಗಳನ್ನು ಆಲಿಸುವ ಕಾತರ ಇದೆಯೇ ?...ಆಲಿಸಿ.

ಖಾಲಿಸ್ಥಾನದ ರಾಷ್ಟ್ರೀಯ ಹೂವು ಯಾವುದು ?

ಕಾಲೀಫ್ಲವರ್.

ಖಾಲಿಸ್ಥಾನದ ರಾಷ್ಟ್ರಿಯ ಡ್ರಿಂಕ್ ಯಾವುದು ?

ಗೊತ್ತು... ನೀವು ತಲೆ ಕೆರೆದು ಕಾಲೀಕೋಲಾ ಎನ್ನಬಹುದು. ಆದರೆ ನಿಮ್ಮ ಊಹೆಯನ್ನು ಠುಸ್‌ಗೊಳಿಸುವುದೇ ಪಿ. ಜೆ. ಪ್ರವೀಣರ ಉದ್ದೇಶ... ಇದಕ್ಕೆ ಉತ್ತರ ಶರಬತ್ ಖಾಲ್ಸಾ.

ಖಾಲಿಸ್ಥಾನದ ರಾಷ್ಟ್ರೀಯ ಗರಾಜೀನ ಹೆಸರು–

ಕಾರ್ ಸೇವಾ !

ಖಾಲಿಸ್ಥಾನದ ನೀರಾವರಿ ಯೋಜನೆಗೆ ನಾಮಕರಣ ಮಾಡಿ ನೋಡೋಣ–

ಭರ್‌ನಾಲಾ.

ಖಾಲಿಸ್ಥಾನದ ದೊಡ್ಡ ಗೋಡೆಗೆ ಹೆಸರು ಕೊಡಲು ಸಾಧ್ಯವೇ?

ಗೊತ್ತಿಲ್ಲವೇ ?... ಲಾಂಗೋ ವಾಲ್ ಸಾಹೇಬ್ರು,

ಪಿ. ಜೆ. ಬ್ರಹ್ಮರು ಅಷ್ಟಕ್ಕೇ ಬಿಡದೆ ಖಾಲಿಸ್ಥಾನಕ್ಕೆ ರಾಷ್ಟ್ರಗೀತೆಯನ್ನೂ ರೂಪಿಸಿಬಿಟ್ಟಿದ್ದಾರೆ–

ಸ್ಟೆನ್ ಗನ್ ಮನ್ ಅಧಿನಾಯಕ ಜಯಹೇ !...

ಪಂಜಾಬಿನಿಂದ ದಕ್ಷಿಣಕ್ಕೆ ಬರೋಣ. ಮತ್ತೆ ಆಂಧ್ರಪ್ರದೇಶಕ್ಕೆ. ವಿಶ್ವ

ಹಾಸ್ಯವನ್ನೇ ತನ್ನ ಹೊಟ್ಟೆಯಲ್ಲಿ ತುಂಬಿಕೊಂಡ ಹೈದರಾಬಾದಿಗಳಿಬ್ಬರು ಒಂದು ತೆಲುಗು ಸಿನೆಮಾಗೆ ಹೋಗುತ್ತಿದ್ದಾರೆ.

"ಯಾವ ಸಿನೇಮಾ ಗುರೂ ? "

"ಗೂಂಡಾ".

"ಯಾರಮ್ಮ ಕ್ಯಾಸ್ಟು ?

"ಎಲ್ಲಾ ಕಮ್ಮಗಳೇ."

"ಛೇ... ನಟಿಸಿರೋದು ಯಾರು ?"

"ಚಿರಂಜೀವಿ, ಸಿಲ್ಕ್ ಸ್ಮಿತಾ".

"ಛೇ...ಛೇ... ತಪ್ಪು... ಚಿರಂಜೀವಿ ಅಲ್ಲ... ಸೌಭಾಗ್ಯವತಿ ಸಿಲ್ಕ್ ಸ್ಮಿತಾ"

ತಮಿಳುನಾಡಿನ ಜೋಕೊಂದನ್ನು ನೋಡೋಣ... ಇದಕ್ಕೆ ಹೆಸರು ಕಮಲ ಕಣ್ಣನ ದುರಂತ ಸಾಹಸದ ಅತ್ಯಂತ ರೋಚಕ ಕಥೆ.

(ಪಿ. ಜೆ. ಹೇಳುತ್ತಿದ್ದುದು ಕಮಲಕಣ್ಣನ ದುರಂತ ಸಾಹಸವಲ್ಲ, ಪಾಪ!)

ಕಥೆ :

ಒಂದು ಕಾಡಿತ್ತಂತೆ. ಅಲ್ಲೊಂದು ಹುಲಿ, ಮನುಷ್ಯರು ದೊರೆತರೆ ಕೊಂದು ತಿನ್ನುತ್ತಿತ್ತು. ಆದರೆ ಅದರ ಕಣ್ಣಲ್ಲೇ ಕಣ್ಣಿಟ್ಟು ಧೈರ್ಯವಾಗಿ ನೋಡಿದರೆ ಹುಲಿ ಹೆದರಿ ಓಡುತ್ತಿತ್ತು. ಕಮಲಕಣ್ಣನ್ ಕಾಡಿಗೆ ಹೋದ. ಹುಲಿ ಅವನನ್ನು ನೋಡಿತು. ಅವನೂ ಧೈರ್ಯವಾಗಿ ಬೆರಗುಗಂಗಳಿಂದ ಹುಲಿಯನ್ನೇ ನೋಡಿದ. ಹುಲಿ ಅವನನ್ನು ತಿಂದುಹಾಕಿತು... ಯಾಕೆ ?

ಯಾಕೆ ? ತಲೆ ಕೆರೆಯಿರಿ. ಕೂದಲುದುರಿ ಬೋಳಾದಿತು. ಉತ್ತರ ಸಿಗುವುದಿಲ್ಲ, ನಿಮಗೆ ಉತ್ತರ ಸಿಗುವುದಾದರೂ ಹೇಗೆ ? ಅದು ನನ್ನಲ್ಲಿದೆಯಲ್ಲ ! ಕೊಡುತ್ತೇನೆ, ತೆಗೆದುಕೊಳ್ಳಿ.

ಕಮಲಕಣ್ಣನ್ ಹುಲಿಯನ್ನು ಬೆರಗುಗಂಗಳಿಂದ ನೋಡಿದ– ಬೆರಗೆಂದರೇನು? wonder .. ಅಂದರೆ wonder ಕಣ್ಣು (ವೈ. ಎನ್. ಕೆ. ಕ್ಷಮೆ ಕೋರಿ. ಕಮಲಕಣ್ಣನಿಗೆ ವಂಡರ್ ಕಣ್ಣಿತ್ತು (ಮೆಳ್ಳೆಗಣ್ಣು) ಅವನು ಹುಲಿಯನ್ನು ನೋಡುತ್ತಿದ್ದರೂ ಕಣ್ಣು ಇತರೆಡೆ ವಾಂಡರ್ ಮಾಡುತ್ತಿತ್ತು !

ಪಿ.ಜೆ.ಗಳ ದಾಸ್ತಾನು ದಿನದಿಂದ ದಿನಕ್ಕೆ ಬೆಳೆಯುತ್ತಾ ನಡೆದಿದೆ. ಕಾರಣ ಸರಳವಿದ್ದೀತು. ಕಲಬೆರಕೆಯಾದರೂ ಪಿ.ಜೆ.ಗಳ ಮೌಲ್ಯ ಕುಸಿಯುವುದಿಲ್ಲ. ಜತೆಗೆ ಇಲಿ, ಹೆಗ್ಗಣಗಳ ಕಾಟವಿಲ್ಲ. ಒಮ್ಮೆ ಒಬ್ಬ ಹೇಳಿದ ಪಿ.ಜೆ.ಯನ್ನು ಇತರರು ಬೆಳೆಸಿ ಧಾರಾವಾಹಿ ಆಗಿಸುವುದೂ ಉಂಟು. ಉದಾಹರಣೆಗೊಂದು ಧಾರಾವಾಹಿ ನೋಡೋಣವೇ ?

ವೈ ಕ್ರ್ಯಾಂಪ್ಟನ್ ಗ್ರೀವ್ಸ್ ?

ಬಿಕಾಸ್ ಬಾಂಬೇ ಡೈಯಿಂಗ್ !

ವೈ ಬಾಂಬೇ ಡೈಯಿಂಗ್ ?

ಬಿಕಾಸ್ ಗ್ವಾಲಿಯರ್ ಷೂಟಿಂಗ್ !

ವ್ಹಾಟ್ ಗ್ವಾಲಿಯರ್ ಷೂಟಿಂಗ್ ?

ಎನ್ಫೀಲ್ಡ್ ಬುಲೆಟ್ !

...ಹೀಗೆ ನಿಮಗಿಷ್ಟ!ಬಂದರೆ ನೀವೂ ಬೆಳೆಸಿ. ಸರಣಿಯನ್ನು ಉಳಿಸಿ !

ವ್ಯಾಕರಣ ಪಂಡಿತರೊಬ್ಬರ ಬಗೆಗೂ ಜೋಕುಂಟು.

ರಾಮಸ್ವಾಮಿಯ ವಿರುದ್ಧಾರ್ಥ ಏನು ?

ಹೇಳಿ ನೋಡೋಣ.

ಕೃಷ್ಣಸ್ವಾಮಿ ಎಂದೇನಾದರೂ ಹೇಳೀರಿ ಜೋಕೆ !

ಆಗಂತೂ ನೀವೇ ಆಗಬಹುದು JOKES (ಡುಂಡಿರಾಜ್ ಕ್ಷಮೆ ಕೋರಿ)

ಆದಕ್ಕೆ ಉತ್ತರ–

ರಾಮ ಡಿಡ್ ನಾಟ್ ಸೀ ಮಿ.

ಹೀಗುಂಟಾದ ಜೋಕು ನಡೆದಾಡಿದರೆ ಸರಿ... ಇಲ್ಲವಾದರೆ ಜೋ-ಕಂಟು.

ಸದ್ಯಕ್ಕೀ ಕೊರೆತ ಸಾಕಲ್ಲವೇ ? ಏಕೆಂದರೆ ನೀವು ನನ್ನನ್ನು ಹುಡುಕಿ ಮಹಡಿಯ ಮೇಲಿಂದ ತಳ್ಳುವ ಮನಸ್ಸು ಮಾಡಿದರೆ ? ಪಿ.ಜೆ.ಗಳನ್ನು ಹೇಳಿ ಆತ್ಮಹತ್ಯೆ ಮಾಡಿಕೊಳ್ಳುವ ಉದ್ದೇಶವಂತೂ ನನಗಿಲ್ಲ. ನಕ್ಕು ನಕ್ಕು ಸತ್ತ ಎನ್ನುವುದಕ್ಕೆ ಬದಲು ಪಿ. ಜೆ. ಹೇಳಿ ಹೇಳಿ ಸತ್ತ ಎಂದಾಗಬಾರದಲ್ಲವೇ ?

ಅಂದಹಾಗೆ ಮಹಡಿಯ ಮೇಲಿಂದ ತಳ್ಳುವುದೆಂದರೆ ನೆನಪಿಗೆ ಬಂತು, ಅಂಚೆ ಪೇದೆಯನ್ನು ಮಹಡಿಯಿಂದ ತಳ್ಳಿದರೆ ಅವನು ಹೇಗೆ ಬೀಳಬಹುದು ? "ಟಪಾಲ್" ಎಂದು ಬೀಳಬಹುದೇ ?

ನಾನು ಅಂಚೆಯವನಲ್ಲವಾದ್ದರಿಂದ ಹಾಗೆ ಬೀಳಲಾರೆ. ಹಾಗೆಂದು ನೀವು ತಳ್ಳುವುದಿಲ್ಲವೆಂದು ನಂಬಲು ಸಾಧ್ಯವಿಲ್ಲವಲ್ಲವೇ ? ಆದ್ದರಿಂದ ಕಡೆಯ ಆತ್ಮ ಕಥನಾತ್ಮಕ ಕಿಡಿಯೊಂದಿಗೆ ವಿರಮಿಸುತ್ತೇನೆ.

ಅರುಣ್ ಗೋವಿಲ್ ?

ಹ...ಹ...ಅಷ್ಟೂ ಗೊತ್ತಿಲ್ಲವೇ... ಶ್ರೀ ರಾಮ !

ಶ್ರೀ ರಾಮ ?

...ಆ...ರಾಮನಲ್ಲ...(ಆದರೂ ಸದ್ಯಕ್ಕೆ) ಅರಾಮ !

ನನ್ನ ಕರಾಟೆ !

—ಆನಂದ್

ನಂ ಬೀದಿ ಕೊನೇಲಿ ಒಂದು ಕರಾಟೆ ಸ್ಕೂಲು ಶುರುವಾಯ್ತು. ಸಿಂಗ ಪೂರ್‌ಗೆ ಹೋಗಿ ಇನ್ನೇನೂ ವಿದ್ಯೆ ಹತ್ತದೆ, ಕೆಲಸ ಸಿಕ್ಕದೆ ಇದ್ದ ಜೋಸೆಫ್ ಅನ್ನೋ ಯುವಕ ಕರಾಟೇಲಿ ತಜ್ಞ ಆಗಿ, ಕರೀ ಬೆಳ್ಟ್ ಕಟ್ಟಿಕೊಂಡು ಬಂದೇ ಬಿಟ್ಟ. ನಿಂ ರಕ್ಷಣೆ ನೀವೇ ಮಾಡ್ಕೋ ಬೇಕು, ಪೊಲೀಸರು ಇರೋದು ಕಾರು ಗಳನ್ನು ಲೈಟಿಲ್ಲ ಅಂತ ಹಿಡಿಯುಕ್ಕೆ ಹೊರತಂ ಕಳ್ಳರ್ನ ಸದೆ ಬಡಿಯುಕ್ಕಲ್ಲ ಅಂತೆಲ್ಲ ಪ್ರಚಾರ ಮಾಡಿದ. ನಮ್ಮನೇನಲ್ಲೂ ಎಲ್ಲರ ಅಭಿಪ್ರಾಯೂನೂ, ನಾನೂ ಕರಾಟೆ ಸ್ಕೂಲ್ ಸೇರಲೇಬೇಕು ಅಂತ ! ನಿಂ ಹೊಟ್ಟೆ ಸ್ವಲ್ಪ ಕರಗುತ್ತೆ, ಬೆಳಿಗ್ಗೆ ಎದ್ದು ಹೋಗಿ ಬೆವರು ಸುರಿಸಿ ! ಅಂತ ನನ್ ಹೆಂಡತಿ ಅಲ್ಟಿಮೇಟಂ ಹೊರಡಿಸಿದಳು.

ಸರಿ, ಕರಾಟೆ ಕ್ಲಾಸ್ ಸೇರಿದೆ. ನನ್ನ ವಿಕೃತವಾದ ಆಕೃತಿ ನೋಡಿ ಜೋಸೆಫ್ ಮೊದಲು ಹೆದರಿದ ! ಅನಂತರ ನನಗೆ ಕರಾಟೆ ಕಲಿಸಿದರೆ, ಅವನ ಸ್ಕೂಲ್ ಖ್ಯಾತಿ ನಗರದಲ್ಲೆಲ್ಲ ಹರಡುತ್ತೆ ಅಂತ ನನ್ನೂ ಸೇರಿಸ್ಕೊಂಡ. ಆರು ತಿಂಗಳಲ್ಲಿ ನಾನು ರಜನೀಕಾಂತ್ ತರಹ ಆದೆ ! ಚಂಗ್ ಅಂತ ಎಗರೋದು, ಹಾರೋದು ನನಗೆ ಕರ (ಪಾದ) ತಲಾಮಲಕ ಆಯ್ತು ! ಜೋಸೆಫ್‌ಗೇ ಆಶ್ಚರ್ಯ ಆಯ್ತು. ಪರವಾಯಿಲ್ಲ ಸಾರ್' ಅಂತ ಬೆನ್ನು ತಟ್ಟಿದ. ನಿಮಗೆ ಕಲಿಸಿದ ವಿದ್ಯೇನ ಜನರ ಒಳ್ಳೇದಕ್ಕೆ ಮಾತ್ರ ಉಪಯೋಗಿಸುತ್ತೇವೆ ಅಂತ ಶಪಥ ಮಾಡಿದೆವು.

* * * *

ಶನಿವಾರ ರಾತ್ರೆ ಹತ್ತು ಗಂಟೆ. ಸಣ್ಣಗೆ ಮಳೆ ಬೀಳುತ್ತಿತ್ತು. ಪತ್ತೇದಾರಿ ಕತೇಲಿ ಹೇಳುವ ಹಾಗೆ ಗಾಢಾಂಧಕಾರ. ದೂರದಲ್ಲಿ ನಾಯಿ ಬೊಗಳಿದ ಸದ್ದು. ನಾನು (ಯಾವ ಭಯವೂ ಇಲ್ಲದೆ) ಮನೆ ದಾರಿ ಹಿಡಿದಿದ್ದೆ. ಒಂದು ಗಲ್ಲಿಯಿಂದ ಇಷ್ಟ ಕ್ಕಿದ್ದ ಹಾಗೆ ಆರ್ತ ನಾದ ! ಅಯ್ಯೋ, ಕಳ್ಳಾ ಕಳ್ಳಾ, ! ಅಂತ, ನಾನು ಗಲ್ಲಿ ಕಡೆಗೆ ಧಾವಿಸಿದೆ ! ಮಿಣುಕುತ್ತಿದ್ದ ಲೈಟ್ ಕೆಳಗೆ ಒಂದು ಭಯಾನಕ ದೃಶ್ಯ ! ಒಬ್ಬ

ಧಡಿಯ, ಇನ್ನೊಬ್ಬ ನರಪೇತಲ ಆದ್ಮಿ ಇಬ್ಬರೂ ಒಂದು ಬ್ರೀಫ್ ಕೇಸ್ ಎಳೆದಾಡುತ್ತಿದ್ದಾರೆ. ನಾನು ತಕ್ಷಣ ಕಾರ್ಯೋನ್ಮುಖ (ಕರಾಟೋನ್ಮುಖ) ನಾದೆ. ಹಾ ! ಹೂ ಅಂತ ಅಬ್ಬರಿಸುತ್ತ, ಆ ಧಾಂಡಿಗನ ಕತ್ತಿಗೊಂದು ಚಾಪ್ ಹೊಡೆದೆ! ಮರು ಕ್ಷಣದಲ್ಲಿ ಎಡಗಾಲಿಂದ ಅವನ ಮಂಡಿಗೇಟು ಕೊಟ್ಟೆ. ಅವನು ಬಿದ್ದ ಕೆಳಗೆ, ಮಾತಿಲ್ಲದೆ. ಸಣಕಲ ಅಸಾಮಿಗೆ ಬಹಳ ಸಂತೋಷ ಆಯ್ತು. ನಿಮಗೆ ಎಷ್ಟು ನಮಸ್ಕಾರ ಮಾಡಿದರೂ ಸಾಲದು ಸಾರ್ ಅಂತ ಅವ ಬ್ರೀಫ್‌ಕೇಸ್ ಹಿಡಿದು ಭಯದಿಂದ ಓಡಿಹೋದ. ಕೆಳಗೆ ಬಿದ್ದ ಆಸಾಮೀನ ಇನ್ನೆಲ್ಲಿ ಪೋಲೀಸು ಅಂತ ಪಂಚಾಯ್ತಿ ಮಾಡೋದು, ಸುಮ್ಮನೆ ಬೈದು ಓಡಿಸೋಣ ಅಂತ, ಏಳೋ, ಇನ್ನೇನು ಪ್ರೋಗ್ರಾಂ ಇಟ್ಟಿದೀಯಾ ಅಂತ ಅವನ್ನ ಎಬ್ಬಿಸಿದೆ ! ಅವನು ಭಯದಿಂದ ತೊದಲುತ್ತ ಹೇಳಿದ, 'ಸಾರ್, ಆ ಬ್ರೀಫ್‌ಕೇಸ್ ನನ್ನದೇ !'



ಯಮ ದೂತ :— ಸಾರ್, ಇನ್ಮೇಲೆ ನಮಗೆ ಬೋನಸ್ ಕೊಡಬೇಕು. ಕೆಲ್ಸ ಜಾಸ್ತಿ ಆಗುತ್ತೆ.

ಒಂದಿಷ್ಟು ಮಿನಿ ಪದ್ಯಗಳು

—ಹನುಮಂತೂ

೧

ಹಿಂದೆ

ದುಷ್ಯಂತ ಶಕುಂತಲೆಯನ್ನು ಮರೆಯಲು
ಅವನಿತ್ತ ಉಂಗುರ ಅರಿಯದೇ
ಮೀನ್ ಬಾಯ್ಗೆ ಕೊಟ್ಟಳು.

ಇಂದು

ಶಕುಂತಲೆ ದುಷ್ಯಂತನನ್ನು ಮರೆಯಲು
ಅವನಿತ್ತ ಉಂಗುರ ಹೆದರದೇ
Mean boy ಗೆ ಕೊಟ್ಟಳು.

೨

ಮದುವೆಗೆ ಮುನ್ನ ನನ್ನವಳು
ದಿನವೂ ಮುತ್ತಿನ ಹಾರ ಉಣಬಡಿಸುತ್ತಿದ್ದಳು.
ಮದುವೆಯ ಅನಂತರ
ದಿನವೂ ಬರೇ ಬಡಬಡಿಸುತ್ತಾಳೆ.

೩

ಪರೀಕ್ಷೆಗೆ ಮುನ್ನ ತಯಾರಿಗೆಂದು
ಹನುಮ ದಿನವೂ ಕಾಫಿ ಕುಡಿಯುತ್ತಾನೆ.
ಪರೀಕ್ಷೆಯ ದಿನ ಮಾತ್ರ
ಕುಡಿಯುವುದಿಲ್ಲ, ಕಾಪಿ ಮಾಡುತ್ತಾನೆ.

೪

ದುರಂತ ನಾಯಕ ಸೋತ
ವಧು ಪರೀಕ್ಷೆಯಲ್ಲಿ
ಆದರೂ ಚಿಂತಿಲ್ಲ
ಛಲ ಹೊತ್ತು ಗೆದ್ದೇ ಬಿಟ್ಟ
ಮಧು ಪರೀಕ್ಷೆಯಲ್ಲಿ

ಹಾಸ್ಯ, ವಿನೋದ ವಗೈರೆ

—ಶೇಷ

ಚಿಕ್ಕಂದಿನಿಂದಲೂ ನನಗೆ ಕನ್ನಡದ ಅಭಿಮಾನ ಅಂಟಿಕೊಂಡು ಬಂದಿದೆ. ಸಾಹಿತಿಗಳನ್ನು ಪೂಜಿಸಬೇಕೆಂದು ನನ್ನ ವಿದ್ಯಾರ್ಥಿದೆಸೆಯಲ್ಲಿ ಭಾವಿಸಿದ್ದೆ. ಬಳಿಕ ಅವರೂ ಮನುಷ್ಯರೆಂದು ತಿಳಿದುಕೊಂಡೆ. ಕನ್ನಡದ ಹಾಸ್ಯ ಕ್ಷೇತ್ರದಲ್ಲಿ ನಾ.ಕ. ರತ್ನ, ರಾಶಿ, ಬೀಚಿ ಮೊದಲಾದವರು ಮಾಡಿರುವ ಕೆಲಸವನ್ನು ಬಹಳವಾಗಿ ಗಮನಿಸುತ್ತಿದ್ದೆ. ಸ್ವಲ್ಪ ಸ್ವಲ್ಪ ಬೇರೆ ಭಾಷೆಗಳೂ ಗೊತ್ತಿರುವುದರಿಂದ, ಬೇರೆ ಭಾಷೆಗಳ ಹಾಸ್ಯ ಸಾಹಿತ್ಯಕ್ಕೆ ಹೋಲಿಸಿದರೆ ಕನ್ನಡದ ಸಾಧನೆ ಹೆಚ್ಚಿನದು. ಇಲ್ಲಿ ಹಾಸ್ಯ ನಗೆಗೆ ಮೀಸಲಾಗದೆ ಸಾಹಿತ್ಯದ ಅವಿಭಾಜ್ಯ ಭಾಗವಾಗಿದೆ ಎಂದು ಕಂಡುಕೊಂಡೆ. ನಿಜ ಜೀವನವನ್ನು ಗಮನಿಸಿ ಕೊರವಂಜಿ ಬಳಗದವರು ಮಾಡಿರುವ ಟೀಕೆ ಟಿಪ್ಪಣಿಗಳು ಜೀವನ, ಸಾಹಿತ್ಯ, ವಿಮರ್ಶೆಗಳ ಅತ್ಯುತ್ತಮ ವಿಮರ್ಶೆ ಎಂದುಕೊಂಡೆ.

ಕನ್ನಡದಲ್ಲಿ ಹಾಸ್ಯ ಸಾಹಿತ್ಯವನ್ನು ಕುರಿತ ಚರ್ಚೆಯನ್ನು ನನ್ನ ಆತ್ಮೀಯ ಗೆಳೆಯರ ಬಳಿ ಮಾಡಿ, ಅದು ಮನೋಧರ್ಮ, ಅಭಿರುಚಿಗಳ ಪ್ರಶ್ನೆ ಎಂದು ಅರಿತುಕೊಂಡೆ. ಶಿವಮೊಗ್ಗದಲ್ಲಿ, ಬೆಂಗಳೂರಿನ ಪರಿಷತ್ತಿನಲ್ಲಿ ಹಾಸ್ಯ ಸಾಹಿತ್ಯ ಸಂಕಿರಣಗಳು ನಡೆದಿದ್ದವು. ನಾನೂ ಸಭೆಯಲ್ಲಿ ಕುಳಿತು ಕೇಳಿದ್ದೆ. ಥರ್ಬರ್ ಡ್ರಿಲ್ ಒಂದರಲ್ಲಿ ಒಂದು ದಿಕ್ಕಿಗೆ ಹೋಗುತ್ತಿದ್ದನಂತೆ. ಅವನ ಸಹಪಾಠಿಗಳೆಲ್ಲಾ ಇನ್ನೊಂದು ದಿಕ್ಕಿಗೆ ಮಾರ್ಚ್ ಮಾಡುತ್ತಿದ್ದರಂತೆ. ಸಂಕಿರಣಗಳು ಬಹುಪಾಲು ಸಹಪಾಠಿಗಳನ್ನು ಹೋಲುತ್ತಿದ್ದವು. ಯಾರು ಸರಿ ಎಂದು ಥರ್ಬರ್ ಬರಹವನ್ನೇ ಓದಿ ತಿಳಿದುಕೊಳ್ಳಿ.

ನಾನೀಗ ನನ್ನ ತಾಯಿನಾಡನ್ನು ಬಿಟ್ಟು ಮತ್ತೊಂದು ರಾಜ್ಯದಲ್ಲಿದ್ದೇನೆ. ನನ್ನ ಗೆಳೆಯರೊಬ್ಬರು ಈಚೆಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯು, ವಿನೋದ ಸಾಹಿತ್ಯ ಸಂಕಿರಣವನ್ನು ಮಂಡ್ಯದಲ್ಲಿ ಏರ್ಪಡಿಸಿದೆ ಎಂದು ಬರೆದಿದ್ದರು. ಆ ಮೇಲೆ ಪತ್ರಿಕೆಯಲ್ಲಿಯೂ ಓದಿದೆ. ವಿನೋದ ಸಾಹಿತ್ಯಕ್ಕಾಗಿ ಈ ವರ್ಷದಿಂದ ಪ್ರತ್ಯೇಕ ಬಹುಮಾನವೊಂದನ್ನು ಅಕಾಡೆಮಿ ಘೋಷಿಸಿರುವುದು ಸ್ತುತ್ಯವಾದುದು.

ನನ್ನ ಸ್ವಂತ ಆಲೋಚನೆ ಇಷ್ಟೇ. ಹಾಸ್ಯದ ಒಂದು ಭಾಗ ವಿನೋದ. ಹಾಸ್ಯದಂತೆ ಅದೂ ಒಂದು ಪ್ರವೃತ್ತಿ. ಹಾಸ್ಯವಾಗಲಿ, ವಿನೋದವಾಗಲಿ ಸಹಜ

ಪ್ರವೃತ್ತಿಗಳು. ಆದರೆ ವಿನೋದವು ಹಾಸ್ಯದ ಒಂದು ಅಂಗ. ಹಾಸ್ಯ ಸಾಹಿತ್ಯ ಎಂದರೆ ಹೆಚ್ಚು ಉಚಿತವಾಗುತ್ತಿತ್ತೋ ಏನೋ

ಅದು ಹೇಗಾದರೂ ಇರಲಿ. ನಾನು ಸುಮಾರು 600 ಕಿಲೋ ಮೀಟರ್ ಪ್ರಯಾಣ ಮಾಡಿ ಮಂಡ್ಯಕ್ಕೆ ಬಂದೆ. ಅಲ್ಲಿ ಓದಿದ ಪ್ರಬಂಧಗಳು ವಿದ್ವತ್ಪೂರ್ಣ ವಾಗಿದ್ದವೆಂಬುದು ನಿಜ. ಆದರೆ ಅವು ಹಾಸ್ಯದ ವಿವಿಧ ಕ್ಷೇತ್ರಗಳಲ್ಲಿ ಆದ ಕೃಷಿ ಯನ್ನು ನಿಷ್ಕೃಷ್ಟವಾಗಿ ಗಮನಿಸಲಿಲ್ಲವೇನೋ ಎನ್ನಿಸಿತು. ಏನೇ ಆಗಲಿ ಒಂದು ಯತ್ನವನ್ನು ಮಾಡಿದ್ದು ಅಭಿನಂದನೀಯ. ಶ್ರೀ ಜಿ. ಎಸ್. ಶಿವರುದ್ರಪ್ಪ, ಶ್ರೀ ಎಚ್. ಎಲ್. ಕೇಶವಮೂರ್ತಿ ಮತ್ತು ಡಾ॥ ಬೆಸಗರಹಳ್ಳಿ ರಾಮಣ್ಣ ಅವರು ಒಂದು ಸಾಧನೆಯನ್ನು ಮಾಡಿದ್ದಾರೆ.

ಮನುಷ್ಯ ಏಕೆ ನಗುತ್ತಾನೆ? ಅವನ ದೇಹದಲ್ಲಿ ನಗುವಾಗ ಆಗುವ ವ್ಯತ್ಯಾಸ ಗಳೇನು ? ಎಂದು ಮುಂತಾಗಿ ಪಟ್ಟಿ ಮಾಡುವುದು ಹಾಸ್ಯ ವಿಮರ್ಶೆಗೆ ಹೆಚ್ಚೇನೂ ಸಹಾಯಕವಲ್ಲ. ಎಲ್ಲಾ ಪ್ರಾಣಿಗಳೂ ನಕ್ಕೇ ತೀರುತ್ತವೆ ಎಂಬೊಂದು ಸಿದ್ಧಾಂತ ವನ್ನು ಮಂಡಿಸಿದ್ದಾರೆ ಒಬ್ಬರು. 'ಕೊರವಂಜಿ ಯು ಮಾಡಿದ ಸಾಧನೆಗಳನ್ನು ಗುರುತಿಸುವ ಒಂದು ಪ್ರಬಂಧವೂ ಅಲ್ಲಿ ಮಂಡಿಸಲ್ಪಡಲಿಲ್ಲ. ಅದು also ran ಎಂದು ಹೆಸರಿಸಲ್ಪಟ್ಟಿತು, ಅಷ್ಟೇ.

ನಾ. ಕಸ್ತೂರಿ ಅವರ ಹಾಸ್ಯ ಕವನಗಳು, ರಾಶಿ ಅವರ ಅಣಕವಾಡುಗಳು, ಅ ರಾ. ಸೇ ಅವರ ಲೇಖನ ಮಾಲೆಗಳು, ಲಘು ಕವನಗಳನ್ನು ಗಮನಿಸಿ ಇನ್ನಷ್ಟು ವಿವರವಾದ ವಿಮರ್ಶೆ ಅಗತ್ಯವಾಗುತ್ತದೆ.

ಕನ್ನಡದಲ್ಲಿ ಕಾರಂತ ಅವರು ಬರೆದಿರುವ ವಿಡಂಬನೆಗಳು ಮತ್ತು ಮಾಸ್ತಿ ಅವರ ವಿನೋದ ಕತೆಗಳನ್ನು ಗಮನಿಸುವುದು ಅಗತ್ಯವಾಗುತ್ತದೆ.

ಕುಮಾರ ವ್ಯಾಸನ ಕಾವ್ಯದುದ್ದಕ್ಕೂ ಬರುವ ಹಾಸ್ಯವನ್ನು ಕುರಿತು ಒಬ್ಬರೂ ಇದುವರೆಗೆ ಬರೆದಿಲ್ಲ, ಉತ್ತರ ಕುಮಾರ, ಧನುರ್ಭಂಗಗಳೆರಡನ್ನು ಮಾತ್ರ ಗುರುತಿ ಸಲಾಗಿದೆ.


'ಪತಿಗಳೆನ್ನನು ಮಾರಿ ಧರ್ಮಸ್ಥಿತಿಯ ಕೊಂಡರು',
'ಕಾಲವಹಿಲವ ಕಲಿಸಲೋಸುಗ ಕೋಲಗುರು ಜಾರಿದನು',
'ಬಣಗು ಕವಿಗಳ ಲೆಕ್ಕಪನೆ ಸಾಕೆಣಿಸದಿರು ಶುಕರೂಪನಲ್ಲವೆ ?'
ಇಂತಹವು ಎಷ್ಟಿವೆ ?

ಅಂತೂ ಹಾಸ್ಯ ಸಾಹಿತ್ಯದ ವಿಮರ್ಶೆಗೆ ನಾಂದಿಯನ್ನು ಹಾಡಿರುವುದು ನಿಜಕ್ಕೂ ಸ್ವಾಗತಾರ್ಹ.

ಅಪರಂಜಿಯನ್ನು ಕುರಿತು ನಾಲ್ಕು ಮಾತು. ರಾಶಿ ಅವರು ಅಪರಂಜಿಯ ಮೊದಲ ಸಂಚಿಕೆಯನ್ನೇ ಹೃತ್ಪೂರ್ವಕವಾಗಿ ಪ್ರಶಂಸಿಸಿದ್ದರಂತೆ. ಅದರಲ್ಲಿ ಬಂದಿರುವ ನಾಲ್ಕೈದು ವಿಚಾರ ಸಂಕಿರಣಗಳು, ಪೀಜಿ ಅವರ ನಾಲ್ಕೈದು ಲೇಖನಗಳು, ಆನಂದ್ ಅವರ ಅಪರಂಜಿ ಕಿಡಿಗಳು, ಶಿವು ಅವರ ಏಳೆಂಟು ಲೇಖನಗಳು, ಶೀನೂ, ರಾಮಿ, ದಾಶರಥಿ ದೀಕ್ಷಿತ್ ಮೊದಲಾದವರ ಲೇಖನಗಳು, ಅ. ರಾ. ಸೇ., ಕಪಟ ಕವಿ ಮೊದಲಾದವರ ಲಘು ಕವನಗಳು, ಜಿ. ಎನ್. ಜಿ. ಅವರ ಕೆಲವು ಲೇಖನಗಳು, ಇವುಗಳ ಸೊಬಗನ್ನು, ತಿಳಿನಗೆಯನ್ನು ಅನುಭವಿಸಿಯೇ ಸವಿಯಬೇಕು. ಡುಂಡಿರಾಜ್ ಅವರ ಬಾನುಲಿ ನಾಟಕಗಳು ಸೊಗಸು. ಅಪರಂಜಿಯ ಸಂಪಾದಕೀಯಗಳು, ಅಪರಂಜಿಯ ಸಂದರ್ಶನಗಳು ಇವನ್ನು ಸವಿಯುವ ಓದುಗರು ಅವನ್ನು ಪ್ರಶಂಸಿಸುತ್ತಾರೆ. ಲೀಲಾ ಮಿರ್ಲೆ, ಶಾಂತಾ ರಘು ಮೊದಲಾದ ಲೇಖಕಿಯರು ಬಹಳಷ್ಟು promise ತೋರಿದ್ದಾರೆ.

ರಾಜರತ್ನಂ ಅವರ ಓಬೀರಾಯನ ಕಾಲದಲಿ, ಪಂಜೆಯವರ ಕೆಲ ಕವನಗಳು ಒಳ್ಳೆಯ 'ಅನರ್ಥಗೀತೆ'ಗಳೆಂದು ಗುರುತಿಸದಿರುವುದೂ ಶೋಚನೀಯ. ತುಷಾರದ 'ಕೊರವಂಜಿ' ಪುರವಣಿಯನ್ನು ಯಾರೂ ಗಮನಿಸಲಿಲ್ಲ.

ಇಷ್ಟೆಲ್ಲ ಬರೆದುದಕ್ಕೆ ಒಂದು ಉದ್ದೇಶವಿದೆ. ಇಂಗ್ಲಿಷಿನ humour ಗೆ ಸರಿದೊರೆಯಾಗಿ ನಿಲ್ಲುವ ತಿಳಿನಗೆ ಕನ್ನಡದಲ್ಲಿದೆ. ಪನ್ನೇ ಘನ್ನು, ribaldವೆ ಮಹಾ ಸಾಧನೆ ಎಂದು ಈಚೆಗೆ ಕೆಲವು ವಲಯಗಳಲ್ಲಿ ಗ್ರಹಿಸಲ್ಪಟ್ಟಿದೆ. ಆಗಿರುವ ಗಟ್ಟಿ ಕೆಲಸವನ್ನು ಗುರುತಿಸುವ ಕೆಲಸ ಈಗಲಾದರೂ ಆರಂಭವಾಗಲಿ. ಎಚ್. ಎಲ್. ಕೇಶವಮೂರ್ತಿ ಅವರ ಲೇಖನ ಈಚೆಗೆ ಅಪರಂಜಿಯಲ್ಲಿ ಪ್ರಕಟವಾಯಿತು. ಈ ದಿಕ್ಕಿನಲ್ಲಿ ಅದು ಒಳ್ಳೆಯ ಆರಂಭ.


ಹಡ್ಸನ್ ನದಿ ದಡದ
ಯಲ್ಲೆಲ್ಲಾ ಸುವಿಖ್ಯಾತ
ಗೆಂಡ ಯಾರು ಗೊತ್ತೇ?
ರಿಪ್ ವಾನ್ ವಿಂಕಲ್
ಗಿನ್ನಿಸ್ ಗಿಂತ ಮುಂಚೆ ನಾನು ಹುಟ್ಟಿದ್ದೇ ಇದ್ರೆ, ಅತೀ ದೊಡ್ಡ ಗಯ್ಯಾಳಿ ಗಂಡ ಅನ್ನೋ ಖ್ಯಾತಿ ಗಿನ್ನೀಸ್ ಪುಸ್ತಕದಲ್ಲಿ ಬರ್ತಿತ್ತು!
ಯಾವ ಗಿನ್ನಿಸ್? ಯಾರು ಗಯ್ಯಾಳಿ? ಬಾಯಿ ಮುಚ್ಚು! ಬಾ ಇಲ್ಲಿ!
ತನ್ನ ಹಳ್ಳಿಯ ಗೆಳೆಯರೊಂದಿಗೆ ರಾಜಕೀಯ ಚರ್ಚಿಸೋದು ರಿಪ್ ಗೆ ಪ್ರಿಯವಾದ ಕೆಲಸ.
ರಾಜ ಜಾರ್ಜ್ ಅಂಚೆ ...
ನಿಜ... ನಿಜ. ಅಥವಾ ಉಂಟೇ...? ಉಂಟು
ಇಂಗ್ಲಿಷ್ ಮೂಲ: ಪಂಚ್
ಕನ್ನಡಕ್ಕೆ: ಪಟು
ಅಲ್ಲ!
ಇಲ್ಲಿದ್ದೀಯಾ ಸೋಮಾರಿ ಗೂಬೆ! ಇನ್ನೆಲ್ಲ ನಿನ್ನ ಮುಖ ತೋರಿಸಬೇಡ. ನಿನ್ನ ನಾಯಿದೂ ಕೂಡಾ
ಆಗಲಿ ಕಣೆ.
ಆಗಲಿ ಕಣೆ.
ಜಿಗುಪ್ಸೆಯಿಂದ ರಿಪ್ ಕಾಟ್ಸ್ಕಿಲ್ ಬೆಟ್ಟಗಳಲ್ಲಿ ಅಳಿಲು ಬೇಟೆಗೆ ಹೊರಟ.
ಛೇ! ತಿರುಗಿ ಗುರಿ ತಪ್ಪಿತು. ಅದ್ಯಾರು ನನ್ನ ಕರೀತಿರೋದು? ನನ್ನ ಹೆಂಡ್ತಿನಾ?
ಅಲ್ಲ, ಇನ್ನಾರೋ.


గుడు గుడు
గుడు గుడు
అరె! అదు నానల్లా?

ಕಾರಾಗೃಹದಲ್ಲಿ ಕವಿಗಳು

—ಎಚ್. ಡುಂಡಿರಾಜ್

ಮಂಡ್ಯದಲ್ಲಿ ವಿನೋದ ಕವಿಗೋಷ್ಠಿಗೆ
ಹೋಗಿದ್ದಾಗ, ನಾನು ಮತ್ತು ಅ. ರಾ. ಸೇ. ಒಟ್ಟಿಗೆ
ಒಂದೇ ರೂಮಿನಲ್ಲಿ ಅಪರೂಪಕ್ಕೆ
ಒಂದು ಕಾಟಿನಲ್ಲಿ ಒಬ್ಬೊಬ್ಬರೇ
(ಅಂದರೆ ಹೆಂಡತಿ, ತಿಗಣೆ ಕಾಟವಿಲ್ಲದೆ)
ಹಾಯಾಗಿ ಮಲಗಿದ್ದಾಗ ಅಥವ
ಪರಸ್ಪರ ಕೊರೆತದಲ್ಲಿ ಮುಳುಗಿದ್ದಾಗ
ಆ ವಸತಿ ಗೃಹದ ಗೂರ್ಖ
(ಖಂಡಿತ ಶತ ಮೂರ್ಖ)
ಹೊರ ಬಾಗಿಲಿಗೆ ಹಾಕಿ ಹೋದ ಬೀಗ !

ಗೋಷ್ಠಿ ಶುರುವಾಗಲು ಇನ್ನು ಕಾಲು ಗಂಟೆ
ಅಷ್ಟರೊಳಗೆ ಇಲ್ಲಿಂದ ಬಿಡುಗಡೆ ಉಂಟೆ?
ಎಂದು ಚಿಂತಾಕ್ರಾಂತರಾದ ಅ. ರಾ. ಸೇ.,
ನನಗೋ (ಅವರದ್ದೆ ಪ್ರಾಸ) ನಿರಾಸೆ
ಸರಳುಗಳ ಹಿಂದೆ ಕೈದಿಗಳ ಹಾಗೆ
ಕಂಡಕಂಡವರಿಗೆಲ್ಲ ಕೈ ಮಾಡಿ ಕೂಗೆ
'ಬಾಗಿಲನು ತೆರೆದು SAVE ಮಾಡೊ ಹರಿಯೆ'
ಎಂಬ ನಮ್ಮ ಮೊರೆ ಕೇಳಿ
ಪುಣ್ಯಾತ್ಮರೊಬ್ಬರ ಗಮನ ಅತ್ತ ಹರಿಯೆ
ಅಂತೂ ಹೊರ ಬಂದೆವು. ಇರಲಿ,

ಆದರೆ, ಕೊನೆಗೂ ತಿಳಿಯಲಿಲ್ಲ ನಮಗೆ
ಕನ್ನಡ ಬಾರದ ಆ ಗೂರ್ಖನಿಗೆ
ಗೊತ್ತಾದದ್ದು ಹೇಗೆ
ನಾವಿಬ್ಬರು ಕವಿಗಳೆಂದು ?
ನಾವು ಗೋಷ್ಠಿಗೆ ಬಂದರೆ
ನೆರೆದ ಕಿವಿಗಳಿಗೆ ತೊಂದರೆ
ಆಗಬಹುದೆಂದು !

(ಮಂಡ್ಯದ ವಿನೋದ ಕವಿಗೋಷ್ಠಿಗೆ ಹೋದಾಗಿನ ಅನುಭವ.)



“ಕಲರ್ ಟಿ. ವಿ. ನಿಮ್ಮೂರ್ಗೂ ಬಂತಲ್ಲ.
ಖಂಡಿತಾ ನಮಗೇ ನಿನ್ನ ಓಟು ತಿಳೀತಾ !

ಕೊರವಂಜಿಯಿಂದ....



ರಂಗಪ್ಪ ಮತ್ತು ರಾವಣಭಾತ್

—ಬೀರಣ್ಣ

ಬೃಹ್ಮೇಂದ್ರ ಭವನದ ಮೂರನೆಯ ಮಹಡಿಯಲ್ಲಿ ಮಾತಿನ ಶಬ್ದವು ನಿಂತು ಹೋಗಿತ್ತು...ಆಗಾಗ್ಗೆ "ಭೇಷಾಗಿದೆ ?", "ಶಾಭಾಸ್!", "ವಹವ್ವಾ !" ಎಂಬವು ಮಾತ್ರ ಕೇಳಿ ಬರುತ್ತಿದ್ದವು. ಗವಾಯಿ ಸಂಗೀತವೇ ಎಂದು ಕೇಳಬಹುದು· ಗವಾಯಿ ಸಂಗೀತಕ್ಕಿಂತ ಸ್ವಾರಸ್ಯವಾದ ವಿಷಯ; ಒಳ್ಳೆ ಸೊಗಸಾದ ರಾವಣಭಾತ್!

ರಾವಣಭಾತೆಂದರೆ ಈಗಿನ ಅನೇಕರಿಗೆ ಅರ್ಥವಾಗುವುದೇ ಇಲ್ಲ. ಖಾಂದಾ ಭಾತ್, ಖೇಲಾಭಾತ್, ಬಟಾಣಿಭಾತ್ ಎಂದು ಹಿಂದೂಸ್ಥಾನೀ ಹೆಸರಿರುವುದನ್ನು ಹೇಳಿದರೆ ಎಲ್ಲರೂ ಒಡನೆ ತಲೆ ತೂಗುತ್ತಾರೆ. ಅಥವಾ ನಳಿನಿಭಾತ್, ಕನ್ನನ್ ಭಾತ್ ಇವೇ ಮೊದಲಾದ ಸಿನಿಮಾ ತಾರೆಯರ ಹೆಸರಿರುವುದು ಹೇಳಿದರೂ ಒಡನೆ ಅರ್ಥವಾಗುತ್ತೆ. ಆದರೆ ಅನಾದಿಯಿಂದ ರಾಮಾಯಣ ಕಾಲದಿಂದಲೂ ಬಂದ ರಾವಣಭಾತೆಂದರೆ ಶೇಕಡ ತೊಂಭತ್ತೊಂಭತ್ತು ಜನ ಏನದು? ಎಂದು ಕಣ್ಣು ಕಣ್ಣು ಬಿಡುತ್ತಾರೆ. ಯಾರಾದರೂ ಒಬ್ಬರಿಬ್ಬರು ಮಾತ್ರ "ಅದೇನು ಮಹಾ ? ಹುಳಿ ಯನ್ನ, ಅಷ್ಟೆ !" ಎನ್ನಬಹುದು ಆದರೆ ಹುಳಿಯನ್ನಕ್ಕೂ ರಾವಣಭಾತಿಗೂ ಅಜಗಜಾಂತರ. ಅನ್ನದಲ್ಲಿ ಕಲಸಿದ ಬದನೇಕಾಯಿ ಪಲ್ಯಕ್ಕೂ. ವಾಂಗಿಭಾತಿಗೂ ಇದ್ದ ಹಾಗೆ. ಅಥವಾ ಮಜ್ಜಿಗೆ ಅನ್ನಕ್ಕೂ ಬಕ್ಕಾಳಾಭಾತಿಗೂ ಇದ್ದ ಹಾಗೆ !

ರಾವಣಭಾತು ಮೊದಲು ರಾಕ್ಷಸೇಶ್ವರನಾದ ರಾವಣನ ಮನೆಯಲ್ಲಿ ಮಾಡ ಲ್ಪಡುತ್ತಿದ್ದು, ರಾಮನ ದಂಡಯಾತ್ರೆಯಾದ ಮೇಲೆ ಭರತಖಂಡಕ್ಕೆ ಹಬ್ಬಿತು.ಹನು

ಮಂತನು ಲಂಕೆಯಲ್ಲಿ ಸೀತೆಯನ್ನು ಹುಡುಕುತ್ತಿದ್ದಾಗ ರಾವಣನ ಅಡಿಗೆ ಮನೆಯಲ್ಲಿ ಟ್ಟಿದ್ದ ರಾಶಿ ರಾಶಿ ರಾವಣಭಾತನ್ನು ಕಂಡು ಇಷೇನಿರಬಹುದೆಂದು ತಿಂದು ನೋಡಿ, ಅಚ್ಚರಿಗೊಂಡು ಅಲ್ಲಿದ್ದುದನ್ನೆಲ್ಲಾ ಬೃಹದ್ರೂಪದಲ್ಲಿ ಒಂದೇ ಬಾರಿ ಗಬಕ್ಕನೆ ನುಂಗಿ ಮತ್ತೆ ಸೂಕ್ಷ್ಮ ರೂಪವನ್ನು ಧರಿಸುವುದೇ ಕಷ್ಟವಾಗಿ, ಅರ್ಧ ಘಂಟೆ ಹೊತ್ತು ಅಡಿಗೆ ಮನೆಯನ್ನೇ ಬಿಟ್ಟು ಬರದೆ, ಕಥೆಯನ್ನು ಮುಂದುವರೆಸುವುದಕ್ಕಾಗಿ ಕಾದಿದ್ದ ಆದಿ ಕವಿ ವಾಲ್ಮೀಕಿಗೆ ತಲೆನೋವು ಬರುವಂತೆ ಮಾಡಿಬಿಟ್ಟ ವಿಚಾರ ಶಂಖ ಪುರಾಣದಲ್ಲಿ ವಿಸ್ತರಿಸಲ್ಪಟ್ಟಿದೆ. ರಾಮನು ಅಯೋಧ್ಯೆಗೆ ಹಿಂತಿರುಗುವಾಗ ರಾವಣ ಭಾತಿನ ಬುತ್ತಿಯನ್ನು ಪುಷ್ಪಕದಲ್ಲಿಟ್ಟು ತಂದದ್ದು; ದಾರಿಯಲ್ಲಿ ಅಗಸ್ತ್ಯರಿಗೆ ಕೊಟ್ಟ. ಅವರು ಆದನ್ನು ತಿಂದು. ಅದರ ಮೇಲೆ ಬಾಯಾರಿಕೆಯಿಂದ ಸಮುದ್ರವನ್ನೆಲ್ಲಾ ಕುಡಿದುಬಿಟ್ಟಿದ್ದು; ನಂದೀಗ್ರಾಮದಲ್ಲಿ ಭರತನು ಅದರ ರುಚಿ ನೋಡಿ ಪರವಶನಾಗಿ ಮನುಷ್ಯನು ಜೀವದೊಂದಿಗೆ ಮಾತ್ರ ಇದ್ದದ್ದೇ ಆದರೆ ನೂರು ವರ್ಷಗಳ ಮೇಲಾದರೂ ಇಂತಹ ಆನಂದವನ್ನು ಕಂಡೇ ಕಾಣುವನು ಎಂದು ಹೊಗಳಿದ್ದು ಎಲ್ಲರಿಗೂ ತಿಳಿದ ವಿಷಯ. ಈ ರಾವಣಭಾತಿನ ಪೂರ್ವ ಚರಿತ್ರೆ ನನಗೆ ಅಷ್ಟಾಗಿ ಗೊತ್ತಿರಲಿಲ್ಲ. ಮೊನ್ನೆ ನಮ್ಮ ಭೀಮಣ್ಣನು ಹೇಳಿದ ಮೇಲೆ ತಿಳಿಯಿತು. ಆ ದಿವಸ ಬೃಹ್ಮೇಂದ್ರ ಭವನದಲ್ಲಿ "ಸ್ಪೆಷಲ್ಲಾಗಿ" ಅದರ ತಯಾರಿಕೆಯು ಭೀಮಣ್ಣನ ಸಲಹೆಯ ಮೇರೆಯೇ. ಅದೂ ರೇಷನ್ ಕಾಲವಾದ್ದರಿಂದ ನಮ್ಮ ಮೂರನೆಯ ಪಂಕ್ತಿಯ ವರೆಗೆ ಮಾತ್ರ.

ಒಬ್ಬೊಬ್ಬರೂ ಎರಡು.ಮೂರು ತಟ್ಟೆಗಳ ತುಂಬ ತಿಂದದ್ದಾಯಿತು. ಕುಳ್ಳಪ್ಪನು ಭಾತಿನೊಡನೆ ಖಾರಾಬೂಂದಿಯನ್ನು ಸೇರಿಸಿ ಹೊಡೆದದ್ದೂ ಹೊಡೆದದ್ದೆ ! ಚಾಸುಂದಿ, ಬಾದಾಮಿ ಹಾಲಿನ ಗೋವಿಂದಸಾಮಿಯು ಕಣ್ಣು ಮೂಗುಗಳಲ್ಲಿ ನೀರು ಸುರಿಸುತ್ತಾ "ಭೇಷ್, ಭೇಷ್," ಎಂದು ಐದು ತಟ್ಟೆಗಳನ್ನು ಮುಗಿಸಿದನು. ಆರನೆ ತಟ್ಟೆಯಲ್ಲಿ ಅರ್ಧ ತಿನ್ನುವ ವೇಳೆಗೆ ಅವನಿಗೂ ಸಾಕಾಗಿ ಹೋಗಿ ತಟ್ಟೆಯನ್ನು ಮೇಜಿನ ಮಧ್ಯಕ್ಕೆ ತಳ್ಳಿಬಿಟ್ಟು, "ಉಸ್ಸಪ್ಪಾ" ಎಂದು ಹಿಂದಕ್ಕೆ ಒರಗಿಬಿಟ್ಟನು

ಎಲ್ಲರೂ "ಉಂಟೇ, ಉಂಟೇ, ಪೂರೈಸಿಬಿಡಬೇಕು" ಎಂದರು.

ಅವನು "ಹಾಳು ಅನ್ನದ್ದು "ಹೆಚ್ಚು ತಿನ್ನುವುದಕ್ಕೇ ಆಗುವುದಿಲ್ಲ" ಎಂದನು. ಕುಳ್ಳಪ್ಪನು "ಬಯ್ಯಬಾರದು, ಅನ್ನದೇವತೆ ನೊಂದುಕೊಂಡಾಳು. ತಪ್ಪಾಯಿತೆಂದು ಕೆನ್ನೆಗೆ ಹೊಡೆದುಕೊ" ಎಂದನು.

ಕಪ್ಪಣ್ಣನು "ಈ ರೇಷ್ಮ ಕಾಲದಲ್ಲಿ ಸಿಕ್ಕುವುದೇ ಕಷ್ಟ—ಬಿಡುವುದುಂಟೆ ? ಅಲ್ಲದೆ ರಾವಣನೇನಂದುಕೊಂಡಾನು ? ತಿಂದುಬಿಡು" ಎಂದನು.

ಭೀಮಣ್ಣನು ತಾನು ಖಾಲಿ ಮಾಡಿದ್ದ ಎಂಟು ತಟ್ಟೆಗಳನ್ನು ಚಿತ್ತಾರವಾಗಿ ಜೋಡಿಸುತ್ತಾ, ಗಂಭೀರವಾದ ಧ್ವನಿಯಲ್ಲಿ "ಅನ್ನಂ ನ ನಿಂದ್ಯಾತ್ !" ಎಂದನು. ರಾವಣಭಾತಿನಲ್ಲಿ ಮಗ್ನನಾಗಿದ್ದ ಭೀಮಣ್ಣನು ಈಗಲೇ ಬಾಯಿಬಿಟ್ಟದ್ದು. ಒಡನೆ ಉದುರಿತು ಅಣಿಮುತ್ತಿನಂಥಾ ವಾಕ್ಯ :

"ವೇದದಲ್ಲಿ ಹೇಳಿದೆ—ಅನ್ನವನ್ನು ದೂಷಿಸಬಾರದು ಎಂದು. ಅನ್ನದ ಮಹತ್ವ ಯಾವುದಕ್ಕೂ ಇಲ್ಲ. ಶ್ರೀ ಕೃಷ್ಣನು ಕೂಡ ಗೀತೆಯಲ್ಲಿ ಅನ್ನಾದ್ಭವಂತಿ ಭೂತಾನಿ ಎಂದು ಹೇಳಿದ್ದಾನೆ"... ನಾವುಗಳೆಲ್ಲಾ ನಮ್ಮ ನಮ್ಮ ಜಾಗಗಳಲ್ಲಿ ಸರಿ ಮಾಡಿಕೊಂಡು ಕೂತೆವು. "ನನ್ನ ಸೋದರಳಿಯ ರಂಗಪ್ಪನಂತೂ ಈ ವಿಚಾರದಲ್ಲಿ ಬಹಳ ಖಂಡಿತ. ಒಂದು ಅಗುಳು ಅನ್ನ ಚೆಲ್ಲುವುದನ್ನೂ ಸಹಿಸುವುದಿಲ್ಲ. ಅದ ರಿಂದಲೇ ಅವನು ತನ್ನ ಒಲವಿನ ಲಲಿತೆಯನ್ನು ಮದುವೆಯಾದದ್ದು ಮತ್ತು 'ವೀರ ಬಹದ್ದೂರ್' ಎಂಬ ಬಿರುದು ಗಳಿಸಿದ್ದು...."

ಗೋವಿಂದಸ್ವಾಮಿಯು, "ಆದರೆ ಆರು ತಟ್ಟೆ ರಾವಣಭಾತನ್ನು ತಿನ್ನ..."

"ನಮ್ಮ ರಂಗಪ್ಪನು ತಂದೆ ತಾಯಿಗಳಿಗೆ ಒಬ್ಬನೇ ಮಗ (ಗಣಪಾ, ಇನ್ನೊಂದು ಲೋಟ ನೀರು !)" ಎಂದು ಮುಂದುವರೆಸಿದನು ಭೀಮಣ್ಣ. "ಲಕ್ಷಾಂ ತರ ರೂಪಾಯಿ ಆಸ್ತಿ. ದೊಡ್ಡ ಮನೆ, ಮಠ, ಆಳುಕಾಳು ಎಲ್ಲಾ. ಹನ್ನೆರಡನೆ ವಯಸ್ಸಿನಲ್ಲಿಯೇ ಅಪ್ಪ, ಅಮ್ಮ ಇಬ್ಬರೂ ಪರಂಧಾಮ ಸೇರಿದರು. ಆ ಚಿಕ್ಕ ವಯಸ್ಸಿನಿಂದಲೂ ರಂಗಪ್ಪನದೇ ಅಧಿಪತ್ಯ. ವಿಧವೆ ಸೋದರತ್ತೆಯೊಬ್ಬಳು ಮನೆ ಮೇಲ್ವಿಚಾರಣೆಗಾಗಿ ನಿಂತಳು. ಇವನಿಗೆ ಹದಿನಾರು ವಯಸ್ಸಾಯಿತೋ ಇಲ್ಲವೋ, ಒಳ್ಳೇ ತೊಳೆದ ಕೆಂಡದಂತಿದ್ದ ಕುರೂಪಿಯಾದ ತನ್ನ ಮಗಳನ್ನು ಇವನಿಗೆ ಮದುವೆ ಮಾಡಿ ಅವಳನ್ನು ಇವನ ಆಸ್ತಿಗೆಲ್ಲಾ ಉತ್ತರಾಧಿಕಾರಿಣಿ ಮಾಡಬೇಕೆಂದು ತಂತ್ರ ಮಾಡಲು ಆರಂಭಿಸಿದಳು. ರಂಗಪ್ಪನು ಏನೇನೋ ಮಾಡಿ ಐದಾರು ವರ್ಷಗಳ ಕಾಲ ತಪ್ಪಿಸಿಕೊಂಡು ತಳ್ಳಿದನು. ಕೊನೆಗೆ ಸಿಕ್ಕಿಬಿದ್ದು ಬಿಡುವ ಪ್ರಸಂಗ ಬಂದದ್ದನ್ನು ನೋಡಿ ಮರುತಂತ್ರವೊಂದನ್ನು ಹೂಡಿದನು. ಅವಳನ್ನು ಕಾಶಿಯಾತ್ರೆಗೆಂದು ಕಳುಹಿಸಿಕೊಟ್ಟು, ಅವಳು ಬರುವುದರೊಳಗಾಗಿ ತಾನು

ಮುಂಬಯಿಂದ ಯಾವುದೋ ಪಾರ್ಶಿ ಹುಡುಗಿಯನ್ನು ಕರೆದುಕೊಂಡು ಬಂದು ಮದುವೆ ಮಾಡಿಕೊಂಡಿರುವುದಾಗಿ ಸುದ್ದಿ ಹುಟ್ಟಿಸಿದನು. ಆಕೆಯು ಇದನ್ನು ಕೇಳಿ ಕೋಪದಿಂದ ತಿರಂಗಿ ನಿನ್ನ ಮುಖ ನೋಡುವುದಿಲ್ಲವೆಂದು ಬೇರೆ ಹೊರಟು ಹೋದಳು. ರಂಗಪ್ಪನು "ದಮ್ಮಯ್ಯ, ಬಿಡುಗಡೆಯಾಯಿತಲ್ಲಾ" ಎಂದು ತನ್ನನ್ನು ತಾನೇ ಬೆನ್ನು ತಟ್ಟಿಕೊಂಡನು.

ಅವನೇನೋ ಗಂಡ ತಪ್ಪಿತಲ್ಲ ಎಂದಿದ್ದರೂ ಅವನ ವಿಧಿಯು ಬೆನ್ನಹಿಂದೆ ದೊಣ್ಣೆ ಹಿಡಿದು ಕಾದೇ ಇತ್ತು. ಆ ವಿಧಿಯು ಲಲಿತೆಯ ರೂಪದಲ್ಲಿ ಅವತಾರ ಹೊಂದಿತ್ತು ! ಲಲಿತೆಯು ಆಧುನಿಕ ಯುವತಿ. ಬಿ. ಎ. ಪಾಸು ಮಾಡಿದ್ದಳು. ಜಾರ್ಜೆಟ್ ಸೀರೆ, ಓರೆ ಬೈತಲೆ, ಎತ್ತರವಾದ ಹಿಮ್ಮಡಿಯ ಜೋಡುಗಳು, ಕೈಗಡಿಯಾರ, ಮುಖಕ್ಕೆ ಪೌಡರ್, ಕೈಯಲ್ಲಿ "ವ್ಯಾನಿಟಿ ಬ್ಯಾಗ್" ಎಲ್ಲಾ ಸಾಂಗೋಪಾಂಗ...

ರಂಗಪ್ಪನು ಲಲಿತೆಯನ್ನು ಮೊದಲು ಕಂಡದ್ದು ಸಿನಿಮಾದಲ್ಲಿ. ತನ್ನ ಅಣ್ಣ ತಮ್ಮಂದಿರೊಡನೆ ಹಿಂದಿನ ಸಾಲಿನ ಕುರ್ಚಿಯಲ್ಲಿ ಕುಳಿತಿದ್ದಳು. ರಂಗಪ್ಪನು ಮುಂದಿನ ಸಾಲಿನ ಕುರ್ಚಿಯಲ್ಲಿ. ಹಿಂದಿನ ಸಾಲು ಮುಂದಿನ ಸಾಲಿಗಿಂತ ಎತ್ತರದ ಮಟ್ಟ. ಸಾಧಾರಣವಾಗಿ ಹಿಂದಿನ ಸಾಲಿನವರ ಕಾಲುಗಳು ಮುಂದಿನ ಸಾಲಿನ ಕುರ್ಚಿಗಳ ಬೆನ್ನಿನ ಮೇಲೆ ತಾನೆ ? ಲಲಿತೆಯೂ ಆಧುನಿಕ ರೀತಿಯನ್ನನುಸರಿಸಿ ತನ್ನ ಕಾಲನ್ನು ಮುಂದಿದ್ದ ರಂಗಪ್ಪನ ಕುರ್ಚಿಯ ಮೇಲಿಟ್ಟಿದ್ದಳು. ಸಿನಿಮಾದ ಕಥೆಯು ಸ್ವಾರಸ್ಯವಾದಾಗಲೆಲ್ಲ ಲಲಿತೆಯ ಕಾಲಿನ ತುದಿಯು ರಂಗಪ್ಪನ ಬೆನ್ನಿನಲ್ಲಿಯೋ, ಕುತ್ತಿಗೆಯಲ್ಲಿಯೋ ತಿವಿಯುವುದು. ರಂಗಪ್ಪನು ಹಿಂತಿರುಗಿ ನೋಡುವನು. ಅವಳು "ಐ ಯಾಮ್ ಸಾರಿ (I am sorry)—ಕ್ಷಮಿಸಬೇಕು" ಎಂದು ಕಾಲು ಹಿಂದಕ್ಕೆಳೆದುಕೊಳ್ಳುವಳು. ರಂಗಪ್ಪನು "ಪ್ಲೀಸ್ ಡೋಂಟ್ ಮೈಂಡ್ (Please don't mind) ಏನೂ ಪರವಾಗಿಲ್ಲ" ಎನ್ನುವನು. ಕಥೆ ಮತ್ತೆ ಸ್ವಾರಸ್ಯವಾದಾಗ ರಂಗಪ್ಪನಿಗೆ ಮತ್ತೆ ತಿವಿತ, ಲಲಿತೆಯು ಮತ್ತೆ ''ಐ ಯಾಮ್ ಸಾರಿ"; ಅವನು ಮತ್ತೆ ''ಪ್ಲೀಸ್ ಡೋಂಟ್ ಮೈಂಡ್'' ಹೀಗೆ ಹಲವಾರು ಸಲ ನಡೆಯಿತು. ರಂಗಪ್ಪನು ನನಗೆ ಇದನ್ನು ಆಮೇಲೆ ಹೇಳಿದಾಗ "ಮಾವ, ಯಾವ ಕಾವ್ಯದಲ್ಲಿ ತಾನೆ ನಾಯಕ ನಾಯಕಿಯರ ಪ್ರಥಮ ಸಮಾಗಮದ ಸನ್ನಿವೇಶವು ಇಷ್ಟು ಸ್ವಾರಸ್ಯವಾಗಿದೆ ?" ಎಂದನು. "ಎಲ್ಲಿಯೂ ಇಲ್ಲಪ್ಪ. ಮದುವೆಯಾದ ಮೇಲಿರಲಿ, ಮದುವೆಗೆ ಮುಂಚೆಯೇ ನಾಯಕಿಯ ಪಾದ ಸ್ಪರ್ಶ – ಅಲ್ಲ, ಪಾದ ರಕ್ಷೆಯ ತುದಿಯ ಸ್ಪರ್ಶ ! ಯಾರಿಗಾಗಿತ್ತು ? ಅಮೋಘವಾಗಿದೆ !" ಎಂದೆ. "ನೀನು ಶೃಂಗಾರವನ್ನರಿಯದ ಗೊಡ್ಡು" ಎಂದು ಬಿಟ್ಟನು. ಅದು ಹಾಗಿರಲಿ...

ಸಿನಿಮಾ ಮುಗಿಯುವ ವೇಳೆಗೆ ದೊಡ್ಡ ಮಳೆ. ಲಲಿತೆಯ ಮನೆಯವರ ಗುಂಪೆಲ್ಲ ಬಾಗಿಲ ಬಳಿ ನಿಂತಿದ್ದರು. ಲಲಿತೆಯ ಅಣ್ಣನು "ಮಳೆ ನಿಲ್ಲುವವರೆಗೂ ಕಾಯಬೇಕು. ಗಾಡಿ ಯಾವುದೂ ಸಿಗುವ ಹಾಗಿಲ್ಲ" ಎಂದನು. ಲಲಿತೆಯು "ನನಗೇನೋ ಛತ್ರಿಯಿದೆ" ಎಂದು ತನ್ನ ಕೈಲಿದ್ದ ಬಣ್ಣದ ಛತ್ರಿಯನ್ನು ಎತ್ತಿ ತಿರುಗಿಸಿದಳು. ಅಷ್ಟು ಹೊತ್ತಿಗೆ ಸರಿಯಾಗಿ ಹಿಂದೆ ಪ್ರಾಪ್ತನಾಗಿದ್ದ ರಂಗಪ್ಪ ! ಛತ್ರಿಯ ತುದಿಯು ಮೂಗಿಗೆ ತಿವಿಯಿತು. ಲಲಿತೆಯು ಹಿಂತಿರಗಿ ನೋಡಿ "ಓ. ಐ ಯಾಮ್ ಸಾರಿ..."

ರಂಗಪ್ಪನು, "ಪ್ಲೀಸ್ ಡೋಂಟ್ ಮೈಂಡ್ !"

ಲಲಿತೆಯ ಅಣ್ಣನು ""ಪೆಟ್ಟಾಯಿತೆ ? ರಕ್ತ ಸುರಿಯುತ್ತಿದೆಯಲ್ಲ ? ನೀರು ತರಲೆ ?" ಎಂದನು.

ರಂಗಪ್ಪನು ಮೂಗನ್ನು ಅಮುಕಿಕೊಳ್ಳುತ್ತಾ "ಏನೂ ಪರವಾಯಿಲ್ಲಾಂದ್ರೆ. ಏನಾಗಿಲ್ಲ" ಎಂದನು.

ಲಲಿತೆಯು "ಈ ಮಳೆ ನೀರನ್ನೇ ಸ್ವಲ್ಪ ಉಪಯೋಗಿಸಿ. ತಣ್ಣಗಿದೆ" ಎಂದಳು. ರಂಗಪ್ಪನು "ಏನೂ ಬೇಡೀಂದ್ರೆ. ಈಗ ನಿಂತು ಹೋಗುತ್ತೆ" ಎನ್ನುತ್ತಾ ಧಾರಾಕಾರವಾಗಿ ಹರಿಯುತ್ತಿದ್ದ ರಕ್ತವನ್ನು ಬೇರೆ ಬೇರೆ ಜೇಬುಗಳಿಂದ ಕರವಸ್ತ್ರಗಳನ್ನು ಒಂದಾದ ಮೇಲೊಂದು ತೆಗೆದು ಒತ್ತಿಕೊಳ್ಳಲಾರಂಭಿಸಿದನು.

ಇಷ್ಟರಲ್ಲಿ ಲಲಿತೆಯ ತಂಗಿಯು "ಅಣ್ಣಾ. ಮನೆಗೆ ಕರೆದುಕೊಂಡು ಹೋಗು. ಹಸಿವಾಗುತ್ತೆ" ಎಂದು ಪೀಡಿಸತೊಡಗಿದಳು. ರಂಗಪ್ಪನು "ನನ್ನಲ್ಲಿ ಮೋಟಾರಿದೆ. ಕರೆದುಕೊಂಡು ಹೋಗಿ ನಿಮ್ಮ ಮನೆಯಲ್ಲಿ ಬಿಟ್ಟು ಬರುತ್ತೇನೆ" ಎಂದನು.

ಲಲಿತೆಯು "ನಿಮಗೆ ಕಷ್ಟವಾಗುತ್ತದೇನೋ !"

"ಇಲ್ಲ, ಏನೂ ಕಷ್ಟವಿಲ್ಲ. ನಿಮ್ಮ ಮನೆ ಎಲ್ಲಿ ?"

"ಕೊಂಕಣಪೇಟೆಯಲ್ಲಿ. ನಿಮ್ಮ ಮನೆ ಎಲ್ಲಿ ?"

"ಮೈಲಾರಪೇಟೆಯಲ್ಲಿ".

"ಹಾಗಾದರೆ ನಿಮ್ಮದೊಂದು ದಿಕ್ಕು, ನಮ್ಮದೊಂದು ದಿಕ್ಕು ಆಯಿತಲ್ಲಾ !"

"ಇಲ್ಲ, ಇಲ್ಲ. ನಾನು ಯಾವಾಗಲೂ ಹಾಗೆ ಸುತ್ತಿಕೊಂಡೇ ಮನೆಗೆ ಹೋಗುವುದು."

"ಹಾಗಾದರೆ ಸರಿ."

ರಂಗಪ್ಪನು ಎಲ್ಲರನ್ನೂ ಮೋಟಾರಿನಲ್ಲಿ ಕೂರಿಸಿಕೊಂಡು ಅವರ ಮನೆಗೆ ಕರೆದುಕೊಂಡು ಹೋಗಿ ಬಿಟ್ಟನು. ಲಲಿತೆಯ ತಂದೆ ತಾಯಿಗಳ ಪರಿಚಯವೂ ಆಯಿತು. ಅವರು "ತುಂಬಾ ಉಪಕಾರವಾಯಿತು. ಈಗ ಕಾಫಿಗೆ ಕೂಡ ವೇಳೆ ಯಾಗಿ ಹೋಗಿದೆ. ಮತ್ತೆ ಹೀಗೆ ಬಂದಾಗ ಯಾವಾಗಲಾದರೂ ದಯಮಾಡಿಸ ಬೇಕು" ಎಂದರು. ರಂಗಪ್ಪನು "ಆಗಲಿ" ಎಂದು ಮೈಲಾರಪೇಟೆಗೆ ಹಿಂತಿರುಗಿ ದನು, ದಾರಿಯಲ್ಲಿ ಪೆಟ್ರೋಲ್ ಸಾಲದೆ ಮೋಟಾರು ನಿಂತುಹೋಗಿ ಮಳೆಯಲ್ಲಿ ಸ್ವಲ್ಪ ದೂರ ತಳ್ಳಿಕೊಂಡು ಹೋಗಬೇಕಾಯಿತು. ತಳ್ಳುವ ಭರದಲ್ಲಿ ಮೂಗಿನಿಂದ ಮತ್ತೆ ರಕ್ತ ಸುರಿಯಿತು. ರಕ್ತ, ಕೆಸರು ಎರಡೂ ಸೇರಿ ಹಾಕಿದ್ದ ಬಟ್ಟೆಗಳೆಲ್ಲಾ ಹಾಳಾಗಿ ಹೋದವು. ಆದರೂ ಇವೆಲ್ಲಾ ಸಾರ್ಥಕವೆಂದೇ ಭಾವಿಸಿದನು....

ಮಾರನೆಯ ದಿನ ಕೊಂಕಣಪೇಟೆಯಲ್ಲಿ ಕೆಲಸ ಹಾಕಿಕೊಂಡು ಟೀ ಹೊತ್ತಿಗೆ ಲಲಿತೆಯ ಮನೆಯಲ್ಲಿ ರಂಗಪ್ಪನು ಸಿದ್ಧ ! "ನಿನ್ನೆ ನಿಮಗೇನೂ ತೊಂದರೆಯಾಗ ಲಿಲ್ಲವೆ ಎಂದು ಕೇಳಿಕೊಂಡು ಹೋಗೋಣ ಎಂದು ಬಂದೆ" ಎಂದು ಪೀಠಿಕೆ. ಸರಿ ಟೀ, ಉಪಾಹಾರ ಮುಂತಾದವುಗಳಿಂದ "ಪಾರ್ಕ"ಗೆ "ಡ್ರೈವ್"; ಮಾರನೆ ದಿನ ಮತ್ತೆ ಸಿನಿಮಾ, ಮತ್ತೊಂದು ದಿವಸ ಒಂದು ಊಟ, ಇತ್ಯಾದಿ ಹಂತಗಳಿಂದ ಕುಲ ಗೋತ್ರಗಳ ವಿಚಾರಣೆ ! ಹದಿನೈದು ದಿನಸಗಳೊಳಗಾಗಿ ಲಲಿತೆಯನ್ನು ರಂಗಪ್ಪನಿಗೆ ಕೊಟ್ಟು ವಿವಾಹವೆಂದು ನಿಷ್ಕರ್ಷೆಯಾಗಿಯೇ ಹೋಯಿತು ! ಲಲಿತೆಯ ತಂದೆ ನಿವೃತ್ತ ಪೊಲೀಸ್ ಅಧಿಕಾರಿ. ಇಲಾಖೆಯ "ಅದಬ್", ಜಬರ್ದಸ್ತಿ ಎಲ್ಲಾ ತುಂಬಿತ್ತು. ಎತ್ತರವಾದ ಆಳು. ಅಜಾನುಬಾಹು, ಒಳ್ಳೆ ಗಿರಲು ಮೀಸೆ, ನೋಡು ವುದಕ್ಕೇನೋ ಶಾಂತಮೂರ್ತಿಯೇ. ಮಿಸುಕಿದರೆ ಮಾತ್ರ ಮೂಗಿನ ಮೇಲೆಯೇ ಕೋಪ ! ಲಲಿತೆಯ ತಾಯಿಯು "ಹುಡುಗಿಯು ಒಪ್ಪಿದ್ದಾಳೋ ಇಲ್ಲವೋ. ಕೇಳ ಬೇಡವೆ?" ಎಂದಳು. ಆತನು ಸೂರಿನರೆವಗೂ ಹಾರಿ ಕೆಳಕ್ಕೆ ಧುಮುಕಿ "ಅವಳ ದೇನಿದೆ ? ಬಿ. ಎ. ಪಾಸು ಮಾಡಿದ ಮಾತ್ರಕ್ಕೆ ಅದರಲ್ಲಿ ಅವಳಿಗೇನು ಸ್ವಾತಂತ್ರ್ಯ ?" ಎಂದು ಘರ್ಜಿಸಿದನು. ಈ ಘರ್ಜನೆಗೆ ಪ್ರಮೇಯವೂ ಇರಲಿಲ್ಲ; ಲಲಿತೆಯ ತಾಯಿಯ ಸಂದೇಹಕ್ಕೆ ಕಾರಣವೂ ಇರಲಿಲ್ಲ. ರಂಗಪ್ಪನ ಆಸ್ತಿಪಾಸ್ತಿ

ಗಳ ವಿಚಾರವನ್ನೆಲ್ಲಾ ತಿಳಿದಿಟ್ಟುಕೊಂಡಿದ್ದ ಲಲಿತೆಗೆ ಈ ಸಂಬಂಧಕ್ಕೆ ಅಸಮ್ಮತಿಯೇನೂ ಇರಲೇ ಇಲ್ಲ...

ಆದರೆ ಒಂದನ್ನು ಮಾತ್ರ ಎಲ್ಲರೂ ಮರೆತರು—ಪೈಲ್ವಾನ್ ಭುಜಂಗನ ವಿಚಾರ ! ಭುಜಂಗರಾಯನು ಲಲಿತೆಯ ತಾಯಿಗೆ ದೂರದ ಸಂಬಂಧ. ಮಲೆನಾಡಿನ ಕಡೆ ಬೇಕಾದಷ್ಟು ಆಸ್ತಿ. ಚಿಕ್ಕಂದಿನಿಂದಲೂ ಲಲಿತೆಯನ್ನು ಅವನಿಗೇ ಕೊಟ್ಟು ಮದುವೆ ಮಾಡಬೇಕೆಂದು ಮಾತು ನಡೆದಿತ್ತು. ಭುಜಂಗರಾಯನಿಗೆ ಓದು ಕಡಿಮೆ. ಆದರೆ ಕುಸ್ತಿಯಲ್ಲಿ ಪರಿಶ್ರಮ ಹೆಚ್ಚು. ನೋಡುವುದಕ್ಕೆ ಕಪ್ರಗೆ ಭೀಮನಂತಿದ್ದನು. ಪೈಲ್ವಾನ್ ವಸ್ತಾದನನ್ನು ಎರಡೇ ನಿಮಿಷದಲ್ಲಿ ಸುಸ್ತು ಹೊಡೆಸಿದ್ದನು. ಅಲ್ಲದೆ ಒಳ್ಳೆ ಷಿಕಾರಿ. ಕಾಡುಗಳಲ್ಲಿ ಒಬ್ಬನೇ ನಿರ್ಭಯವಾಗಿ ತಿರುಗುವನು. ಅವನನ್ನು ಕಂಡರೆ ಕಾಡಿನ ದುಷ್ಟ ಮೃಗಗಳು ಕೂಡ ಪೊದೆಗಳಲ್ಲಿ ಅವಿತುಕೊಂಡು ಕಣ್ಣುಮುಚ್ಚಿ ಯೋಗಾಭ್ಯಾಸದಲ್ಲಿ ನಿರತರಾಗುತಿದ್ದವಂತೆ !

ಅವನಿಗೇನೋ ಲಲಿತೆಯನ್ನೇ ಮದುವೆಯಾಗಬೇಕೆಂದು. ಆದರೆ ಲಲಿತೆಯು "ಮಟ್ಟಿಯನ್ನು ಮೈಗೆ ಹಚ್ಚಿಕೊಂಡು ಹಳದಿ ಸೇವಂತಿಗೆಯ ದಂಡೆ ಹಾರ ಹಾಕಿಕೊಂಡು ಯಾರ್ಯಾರ ಭುಜಗಳ ಮೇಲೋ ಸವಾರಿ ಮಾಡುತ್ತಾ ಮೆರವಣಿಗೆ ಮಾಡಿಸಿಕೊಳ್ಳುವ ಆ ಮಾರಿಚನನ್ನು ನಾನು ಒಲ್ಲೆ" ಎಂದುಬಿಟ್ಟಿದ್ದಳು.

ರಂಗಪ್ಪನಿಗೆ ಲಗ್ನ ನಿಷ್ಕರ್ಷೆಯಾಗಿ ಲಗ್ನಪತ್ರಿಕೆ ಶಾಸ್ತ್ರವೂ ಆಯಿತು. ಆ ದಿವಸ ಎಲ್ಲಾ ಮುಗಿಸಿಕೊಂಡು ರಂಗಪ್ಪನು ಇನ್ನೇನು ಹೊರಡಬೇಕು—ಅಷ್ಟು ಹೊತ್ತಿಗೆ ಇದ್ದಕ್ಕಿದ್ದ ಹಾಗೇ ಪ್ರಾಪ್ತನಾದ—ಪೈಲ್ವಾನ್ ಭುಜಂಗ. ಅವನನ್ನು ನೋಡಿ ಎಲ್ಲರೂ ಹೇಗೆಂದರೆ ಹಾಗೆಯೇ ಪರಾರಿ ! ಲಲಿತೆಯ ತಾಯಿಯು ಅಡಿಗೆ ಮನೆಯಲ್ಲಿಯೇ ಅವಿತುಕೊಂಡಳು. ನಿವೃತ್ತ ಪೋಲೀಸ್ ಅಧಿಕಾರಿಯು ಹಿಂಬಾಗಿಲ ಕಡೆ ಓಟ. ಉಳಿದವರು ಚಲ್ಲಾಪಿಲ್ಲಿ ! ಲಲಿತೆಯ ಅಣ್ಣನೊಬ್ಬನು ಮಾತ್ರ ಸಿಕ್ಕಿಹಾಕಿಕೊಂಡನು.

ಭುಜಂಗನು "ಏನಿದು ವಿಚಾರ ?" ಎಂದನು

ಲಲಿತೆಯ ಅಣ್ಣನು ತೊದಲುತ್ತಾ, "ನ...ನ...ನಮ್ಮ ಲಾ...ಲ್...ಲಲಿತಗೆ ಲ...ಲ...ಲಗ್ನ" ಎಂದ.

"ಲಲಿತಗೆ ಲಗ್ನವೇ ? ಯಾರಿಗೆ ಕೊಟ್ಟು ?"
"ಇವರಿಗೆ" ಎಂದು ರಗಪ್ಪನನ್ನು ತೋರಿಸಿದನು.
ರಂಗಪ್ಪನು "ನಮಸ್ಕಾರ" ಎಂದನು.

ಭುಜಂಗನು "ಏನು ಈ ಕ್ರಿಮಿಗೆ, ಈ ಕೀಟಕ್ಕೆ ಕೊಟ್ಟೆ ? ಸಾಧ್ಯವಿಲ್ಲ !" ಎನ್ನುತ್ತಾ ರಂಗಪ್ಪನನ್ನು ಬೆಕ್ಕಿನ ಮರಿಯನ್ನು ಎತ್ತುವಂತೆ ಕುತ್ತಿಗೆ ಹಿಡಿದು ಎತ್ತಿ ಬಾಗಿಲವರೆಗೂ ತೆಗೆದುಕೊಂಡು ಹೋಗಿ ಅವನ ಮೋಟಾರಿನ ಬಳಿ ಎಸೆದು, ಕೈ ಕೊಡವಿ, ಬಾಗಿಲು ಹಾಕಿಕೊಂಡನು !

ರಂಗಪ್ಪನು ಸ್ವಲ್ಪ ಹೊತ್ತಿನ ಮೇಲೆ ಚೇತರಿಸಿಕೊಂಡೆದ್ದನು. ವೀರರಸವು ಉಕ್ಕಿ ಬಂತು. "ಅವನನ್ನು ಈಗಲೇ ಕೊಂದುಬಿಡಲಿ ?" ಎಂದುಕೊಂಡನು. ಆದರೆ ಕುತ್ತಿಗೆ ಉಳುಕಿ ಮೈ ಎಲ್ಲಾ ಜಜ್ಜಿಹೋಗಿತ್ತು. ಸ್ವಲ್ಪ ಸುಧಾರಿಸಿಕೊಂಡು ಮಾರನೆಯ ದಿನ ಕೊಲ್ಲುವುದೇ ಉತ್ತಮವೆಂದು ತೋರಿತು. ಮೆಲ್ಲಗೆ ತೆವಳಿ ಕೊಂಡು ಹೋಗಿ ಮೋಟಾರಿನಲ್ಲಿ ಕುಳಿತು ಮನೆ ಸೇರಿದನು.

ಒಳ್ಳೆ ಬೆಳದಿಂಗಳು. ಬಟ್ಟೆ ಬದಲಾಯಿಸಿ ಬಿಸಿಲು ಮಚ್ಚಿನಲ್ಲಿ ಕುಳಿತು ಜಜ್ಜಿ ಹೋದ ಭಾಗಗಳಿಗೆಲ್ಲ ತೈಲ ತಿಕ್ಕಿಕೊಳ್ಳುತ್ತಿದ್ದನು. ಸೇವಕನು ಬಂದು "ಯಾರೋ ಬಂದಿದ್ದಾರೆ. ಎಂದನು" ಯಾರೋ ಸ್ನೇಹಿತರಿರಬೇಕೆಂದು ಅಲ್ಲಿಗೇ ಬರಹೇಳಿದನು. ಸೇವಕನು ಹೋದ ಎರಡು ನಿಮಿಷದೊಳಗಾಗಿ ಮಹಡಿ ಎಲ್ಲಾ ಅದುರತೊಡಗಿತು. ಏನಿರಬಹುದೆಂದು ಯೋಚಿಸುವುದರೊಳಗಾಗಿ ರಂಗಪ್ಪನ ಮುಂದೆ ಬಂದು ನಿಂತನು —ಯಮರೂಪಿಯಾದ ಭುಜಂಗರಾಯ !

ರಂಗಪ್ಪನು "ಬ...ಬ...ಬನ್ನಿ. ಕುಳಿತುಕೊಳ್ಳಿ" ಎಂದನು.

"ಕುಳಿತು ಸರಸವಾಡುವುದಕ್ಕೆ ಬಂದಿಲ್ಲ. ನೀನು ಲಲಿತೆಯನ್ನು ಮದವೆ ಯಾಗುವುದು ನಿಶ್ಚಯವೊ ?"

"ಹೌದು."

"ಆ ಯೋಚನೆಯನ್ನು ಬಿಟ್ಟುಬಿಡುವುದು ಮೇಲು. ಇಲ್ಲದಿದ್ದರೆ ನಿನ್ನನ್ನು ಹೀಗೇ ಹಾಕಿ ಕೀಡಿಬಿಡುತ್ತೇನೆ" ಎಂದು ಉಂಗುಷ್ಟದಿಂದ ಸಿಮೆಂಟ್ ನೆಲವನ್ನು

ತೀಡಿದನು. ಬಿಸಿಲು ಮಂಚ್ಚಿನ ನೆಲದ ಒಂದು ದೊಡ್ಡ ಹೆಪ್ಪು ಚಿಮ್ಮಿ ಬಂದು ರಂಗಪ್ಪನ ಎದೆಗೆ ಹೊಡೆಯಿತು. ರಂಗಪ್ಪನಿಗೆ ಮೈ ಎಲ್ಲ ನಡುಕ ಬಂತು.

ಭುಜಂಗನು "ಲಲಿತೆಯನ್ನು ಅಷ್ಟು ದಿವಸಗಳಿಂದ ನಾನೇ ಮದುವೆ ಮಾಡಿ ಕೊಳ್ಳಬೇಕೆಂದಿದ್ದೇನೆ. ಅವಳನ್ನು ಇಷ್ಟು ಎತ್ತರದವಳಿಂದಲೂ ಬಲ್ಲೆ" ಎಂದು ಕೈ ತೋರಿಸಿದನು.

"ಎ...ಎ...ಎಷ್ಟು ಎತ್ತರದವಳಿಂದ ?"

"ಇಷ್ಟು ಎತ್ತರದವಳಿಂದ" ಮತ್ತೆ ಕೈ ತೋರಿಸಿದನು. ಅದನ್ನು ನೋಡಿ ಲಲಿತೆಯು ಏಳೇ ತಿಂಗಳಿಗೆ ಹುಟ್ಟಿರಬೇಕೆಂದು ರಂಗಪ್ಪನಿಗೆ ಭಾಸವಾಯಿತು,

"ಓ !" ಎಂದನು.

"ಪೈಲ್ವಾನ್ ಹಯಾತನನ್ನು ಬಲ್ಲೆಯಾ ?"

"ಇಲ್ಲ, ಯಾರವನು ?"

"ಅವನು ಈಗ ಇಲ್ಲ. ಅವನನ್ನು ನಾನು ಎತ್ತಿ ಅಪ್ಪಳಿಸಿದಾಗ ಆದ ಅವನ ಚೂರುಗಳನ್ನು ಇನ್ನೂ ಹುಡುಕುತ್ತಿದ್ದಾರೆ. ಅವನ ಕಡೆಯವರು......"

"ಕಾಕನಕೋಟೆ ಕಾಡಿನಲ್ಲಿ ನನ್ನ ಮೇಲೆ ಬೀಳಲು ಬಂದ ಹುಲಿಯನ್ನೇನು ಮಾಡಿದೆ ಗೊತ್ತೆ ?"

"ಏನು ಮಾಡಿದಿರಿ ?

"ಬಲಗೈ ಪೆಟ್ಟಾಗಿತ್ತು. ಎಡಗೈಯಿಂದಲೇ ಕುತ್ತಿಗೆ ಹಿಡಿದು ಅಮುಕಿ ತಲೆಯನ್ನು ನೆಲಕ್ಕೆ ಜಜ್ಜಿ, ಕೆಳಗೆ ಹಾಕಿ ತುಳಿದು ಅಪ್ಪಚ್ಚಿ ಮಾಡಿದೆ. ಅದರ ಚರ್ಮ ಈಗಲೂ ಇದೆ.''

''ಓ... !''

''ನದಿಯಲ್ಲಿ ನೀರು ಕುಡಿಯಲು ಇಳಿದಾಗ ಬಂದು ಕಾಲು ಹಿಡಿದುಕೊಂಡ ಮೊಸಳೆಗೇನಾಯಿತು ಗೊತ್ತೆ ?''

''ಇಲ್ಲ...''

''ಬಾಯಲ್ಲಿ ಕೈ ಹಾಕಿ ಅದನ್ನು ದವಡೆಯಿಂದ ಬಾಲದವರೆಗೂ ಎರಡಾಗಿ ಸೀಳಿದೆ. ಆ ಮೇಲೆ ತೂಕ ಮಾಡಲು, ಎರಡು ಭಾಗಗಳೂ ಸಮನಾಗಿದ್ದವು... ಆಗಲೂ ದಿವ್ಯವಾದ (ಮೇಲೆ ನೋಡುತ್ತಾ) ಇಂತಹ ಬೆಳದಿಂಗಳೇ ಇತ್ತು.''

''ಓ...!''

''ನಾಳೆ ಬೆಳಿಗ್ಗೆಯೇ ಲಲಿತೆಯ ತಂದೆಗೆ ಬರೆದುಬಿಡು, ಈ ಮದುವೆ ಸಾಧ್ಯವಿಲ್ಲವೆಂದು. ಇಲ್ಲದಿದ್ದರೆ......''ಕಾಲನ್ನು ನೆಲದ ಮೇಲೆ ಮತ್ತೆ ಅರೆದನ್ನು ರಂಗಪ್ಪನಿಗೆ ಮೈ ಜುಮ್ಮೆಂದು ಕರುಳುಗಳೆಲ್ಲಾ ಹೊರಗೆ ಬರುವ ಹಾಗಾಯಿತು...

ಪೈಲ್ವಾನ್ ಭುಜಂಗನು ಹೊರಟು ಹೋದ ಸ್ವಲ್ಪ ಹೊತ್ತಿನವರೆಗೂ ರಂಗಪ್ಪನಿಗೆ ದಿಕ್ಕೇ ತೋರಲಿಲ್ಲ. ಒಂದು ಕಡೆ ಲಲಿತೆಯ ಮೇಲಿನ ಅನುರಾಗ, ಮತ್ತೊಂದು ಕಡೆ ಪೈಲ್ವಾನ್ ಭುಜಂಗ ! ಇವನಿಗೆ ಹೆದರಿ ಲಲಿತೆಯನ್ನು ಬಿಟ್ಟು ಬಿಡುವುದೆ ? ಅದೂ ಲಗ್ನ ಪತ್ರಿಕೆ ಶಾಸ್ತ್ರವಾದ ಮೇಲೆ ? ಜನಗಳು ಏನಂದಾರು? ಆದರೆ ತನ್ನ ಕುತ್ತಿಗೆಯೇ ಅಪಾಯದಲ್ಲಿರುವಾಗ ಯಾರೇನಂದುಕೊಂಡರೇನು ? ''ಜೀವನ್ ಭದ್ರಾಣಿ ಭದ್ರಾಣಿ ಪಶ್ಯತಿ'' ರಂಗಪ್ಪನಾದರೋ ನೋಡುವುದಕ್ಕೆ ನರಪೇತಲ ನಾರಾಯಣ. ಅವನಿಗೆ ಇದ್ದ ಪಾಂಡಿತ್ಯವೆಲ್ಲಾ ಪಿಳ್ಳಂಗೋವಿಯ ಮೇಲೆ ಸಿನಿಮಾ ಹಾಡುಗಳನ್ನು ನುಡಿಸುವುದು. ನಿಜ. ಮೂಗಿನ ತುದಿಯಲ್ಲಿ ಕಡ್ಡಿ ನಿಲ್ಲಿಸಿ, ಅದರ ಮೇಲೆ ನೆಲ್ಲಿಕಾಯಿಟ್ಟು ಕುಣಿಸಬಲ್ಲನು. ಆದರೆ ಇವುಗಳಿಂದ ಪೈಲ್ವಾನ್ ಭುಜಂಗನನ್ನು ಎದುರಿಸಲು ಆದೀತೇ?... ಕೊನೆಗೆ ''ಕಷ್ಟ ಕಾಲೇ ಸಮುತ್ಪನ್ನೇ ಅರ್ಧಂ ತ್ಯಜತಿ ಪಂಡಿತ'' ಎಂಬುದನ್ನು ನೆನೆಸಿ, ಈಗ ಒದಗಿರುವ ಕಷ್ಟ ಕಾಲದಲ್ಲಿ ಭಾವೀ ಅರ್ಧಾಂಗಿಯನ್ನು ತ್ಯಜಿಸುವುದೇ ಸೂಕ್ತವೆಂದು ನಿರ್ಧರಿಸಿದನು. ಒಡನೆ ಲಲಿತೆಯ ತಂದೆಗೆ ತಾನು ಕೂಡಲೇ ದೇಶಾಂತರ ಹೋಗಬೇಕಾಗಿರುವುದರಿಂದ ಮದುವೆಯು ಈಗ ಸಾಧ್ಯವಿಲ್ಲವೆಂದೂ, ಯಾವಾಗ ಹಿಂತಿರುಗವೆನೋ ಗೊತ್ತಿಲ್ಲವೆಂದೂ, ಲಲಿತೆಗೆ ಬೇರೆ ವರನನ್ನು ನೋಡಬಹುದೆಂದೂ, ದೇವರು ಅವಳಿಗೆ ಒಳ್ಳೆಯದು ಮಾಡಲೆಂದೂ ಬರೆದು, ಪತ್ರವನ್ನು ಬೆಳಿಗ್ಗೆ ಆರು ಘಂಟೆಗೇ ತಲುಪಿಸಬೇಕೆಂದು ಸೇವಕನಿಗೆ ಆಜ್ಞಾಪಿಸಿ, ನಿಶ್ಚಿಂತನಾಗಿ ಮಲಗಿದನು.

ಬೆಳಿಗ್ಗೆ ಎಂಟು ಘಂಟೆಗೆ ಮಕ್ಕಳಂತೆ ನಿದ್ದೆಯಿಂದ ಎದ್ದನು. ಬಿಸಿಲೇರಿತ್ತು. ಪಕ್ಷಿಗಳ ಚಿಲಿಪಿಲಿ. ಹೊರಗೆ ವಾಹನಗಳ ಓಡಾಟದ ಶಬ್ದ. ಅಡಿಗೆ ಮನೆಯಿಂದ ಫಲಾಹಾರಕ್ಕೆ ತಯಾರಾಗುತ್ತಿದ್ದ ಮಸಾಲಾ ದೋಸೆಯ ಘಮ ಘಮ ವಾಸನೆ ......ರಂಗಪ್ಪನಿಗೆ ಪ್ರಪಂಚವು ಬಹಳ ಸುಖಕರವಾಗಿ ಕಾಣಿಸಿತು. ಎದ್ದು ಸಿನಿಮಾ ಹಾಡೊಂದನ್ನು ಸಿಳ್ಳು ಹಾಕುತ್ತಾ ಮುಖ ತೊಳೆದುಕೊಂಡು ಬಂದು ಮಸಾಲೆ ದೋಸೆಯ ಮುಂದೆ ಕುಳಿತನು. ಒಂದು ಚೂರು ನುಂಗಿದ್ದನೋ ಇಲ್ಲವೋ, ಯಾರೋ ಬಂದ ಹಾಗಾಯಿತು. ತಲೆ ಎತ್ತಿ ನೋಡಲು ಲಲಿತೆಯ ತಂದೆ! ಹಳೆಯ ಪೋಲೀಸ್ ಉಡುಪು, ಮುಖದಲ್ಲಿ ರೌದ್ರಾಕಾರ, ಬಲಗೈಯಲ್ಲಿ ಒಂದು ಚಡಿ ಬೆತ್ತ!

ರಂಗಪ್ಪನು ''ಬನ್ನಿ, ಕುಳಿತುಕೊಳ್ಳಿ... ದೊಸೆ ತಿನ್ನುತ್ತೀರಾ ?'' ಎಂದ.

''ಇಲ್ಲ ದೋಸೆ ತಿನ್ನುವುದಿಲ್ಲ, ನಾನು ದೋಸೆ ತಿನ್ನುವುದಕ್ಕೆ ಬರಲಿಲ್ಲ'' ಎಂದು ಘರ್ಜಿಸುತ್ತಾ ಎಡಗೈಲಿದ್ದ ಪತ್ರವನ್ನು ರಂಗಪ್ಪನ ಮುಂದೆಸೆದು, ''ಇದು ನೀವೇ ಬರದದ್ದೋ ?'' ಎಂದು ಪ್ರಶ್ನಿಸಿದ.

''ಹೌದು''

''ನಿನ್ನೆ ಲಗ್ನಪತ್ರಿಕೆ ಶಾಸ್ತ್ರ ಮುಗಿಸಿಕೊಂಡು, ಈವತ್ತು ಮದುವೆ ಒಲ್ಲೆನೆಂದು ಹೇಳುತ್ತೀರಾ ? ನನ್ನನ್ನೂ ನಮ್ಮ ಲಲಿತಳನ್ನೂ ಅವಮಾನಕ್ಕೆ ಗುರಿ ಮಾಡುತ್ತೀರಾ ? ಹುಷಾರ್ ! ನಿಮಗೆ ಸೋರೆಕಾಯಿ ಸೀನಪ್ಪನು ಗೊತ್ತೇ ?''

''ಇಲ್ಲ, ಏನವನ ವಿಚಾರ ?''

''ವಿಚಾರವೇ? ಸೊರೇಕಾಯಿ ಸೀನಪ್ಪನು ನನ್ನ ಅಣ್ಣನ ಮಗಳನ್ನು ಮದುವೆಯಾಗುತ್ತೇನೆಂದು ಮಾತು ಕೊಟ್ಟು ಆಮೇಲೆ ತಪ್ಪಿಸಿಕೊಳ್ಳಲು ನೋಡಿದ. ಅವನನ್ನು ಕುತ್ತಿಗೆ ಹಿಡಿದು ಮನೆ ಹೊರಗಡೆ ಮೆಟ್ಟಲುಗಳ ಮೇಲೆಳೆದುಕೊಂಡು ಬಂದು ನೀರು ಕೇಳುವವರೆಗೂ ಇದೇ ಬೆತ್ತದಿಂದ ಹೊಡೆದೆ !......ಕಾಮಯ್ಯ ಅವರ ಶ್ಯಾಮಯ್ಯ ಗೊತ್ತೇ ?''

''ಗೊತ್ತಿರಬಹುದೆಂದುಕೊಂಡಿದ್ದೆ. ನಿಮ್ಮ ವಯಸ್ಸಿನವನೇ. ನನ್ನ ತಮ್ಮನ ಮಗಳು ಶಾರದೆಯನ್ನು ಮದುವೆಯಾಗುತ್ತೇನೆಂದು ಮಾತು ಕೊಟ್ಟ ಮರೆ

ಮಾಚಲು ಪ್ರಯತ್ನಪಟ್ಟ; ಅವನ ಜುಟ್ಟು ಹಿಡಿದು ಪಡಸಾಲೆ ಮೇಲೆ ರಕ್ತ ಕಾರುವವರೆಗೂ ಹೊಡೆದೆ. ಊರಿನವರೆಲ್ಲ ಸೇರಿದ್ದರು...ನಿಮ್ಮ ಮನೆಗೆ ಪಡಸಾಲೆ ಇದೆಯೇ, ಮೆಟ್ಟಲಿದೆಯೇ ? ಸರಿಯಾಗಿ ನೋಡಲಿಲ್ಲ...''

ರಂಗಪ್ಪನು ಬೆವರು ಒರೆಸಿಕೊಳ್ಳುತ್ತಾ, ಜ್ಞಾಪಿಸಿಕೊಂಡು, ''ಮೆ...ಮೆ... ಮೆಟ್ಟಲು'' ಎಂದನು.

''ಹುಷಾರ್ ! ಲಗ್ನಪತ್ರಿಕೆಯನ್ನು ಅಚ್ಚಿಗೆ ಇವತ್ತೇ ಕಳುಹಿಸುತ್ತೇನೆ. ಏನಾದರೂ ವಿರುದ್ಧವಾದರೆ—ಮೆಟ್ಟಲುಗಳನ್ನು ಚೆನ್ನಾಗಿ ತೊಳೆಸಿಟ್ಟಿರಿ. ಜೋಕೆ!''

ಲಲಿತೆಯ ತಂದೆಯೂ ಹೊರಟು ಹೋದದ್ದು ಒಳ್ಳೆ ಸುಂಟರಗಾಳಿಯು ಬಂದು ಹೋದ ಹಾಗಾಯಿತು. ರಂಗಪ್ಪನು ದೋಸೆಯನ್ನು ಅಲ್ಲಿಗೇ ಬಿಟ್ಟು, ಕೊಠಡಿಗೆ ಹೋಗಿ, ಒದ್ದೆ ಬಟೆಯನ್ನು ತಲೆಗೆ ಕಟ್ಟಿ ಯೋಚಿಸಲಾರಂಭಿಸಿದನು. ಎಷ್ಟು ಯೋಚಿಸಿದರೂ ಅಷ್ಟೆ. ಒಂದು ಕಡೆ ಪೈಲ್ವಾನ್ ಭುಜಂಗ, ಮತ್ತೊಂದು ಕಡೆ ಲಲಿತೆಯ ತಂದೆ ಛಡಿ ಚಿತ್ರದೊಂದಿಗೆ. ಮದುವೆಯಾದರೆ ತಿಗಣೆಯ ಹಾಗೆ ತುಳಿಸಿಕೊಳ್ಳಬೇಕು. ಆಗದಿದ್ದರೆ ರಕ್ತ ಕಾರುವವರೆಗೂ ಛಡಿ ಏಟು ! ಒಳ್ಳೆ ಗ್ರಹಚಾರ ಬಂದ ಹಾಗಾಯಿತು. ಲಲಿತೆಯ ರೂಪದಲ್ಲಿ ! ಯೋಚಿಸಿ, ಯೋಚಿಸಿ, ಕೊನೆಗೆ ವೇಷ ಮರೆಮಾಚಿಕೊಂಡು ಪಲಾಯನವಾಗುವುದೇ ಒಳ್ಳೆಯ ಉಪಾಯವೆಂದು ನಿರ್ಧರಿಸಿದನು.

ಅಷ್ಟು ಹೊತ್ತಿಗೆ ಒಂದು ಘಂಟೆಯಾಗಿತ್ತು. ಪರಿಚಾರಕನು ''ಊಟಕ್ಕೆ ಸಿದ್ಧವಾಗಿದೆ'' ಎಂದನು. ರಂಗಪ್ಪನು ''ಏನಡಿಗೆ ?'' ಎಂದು ಕೇಳಿದನು.''ಕಡಲೆ ಬೇಳೆ ಹೆಸರು ಬೇಳೆ ಕೋಸುಂಬರಿ, ಬದನೇಕಾಯಿ, ಆಲೂಗೆಡ್ಡೆ ಇವುಗಳ ಪಲ್ಯಗಳು ತೊವ್ವೆ, ಬೂದು ಕುಂಬಳಕಾಯಿ; ಮಜ್ಜಿಗೆ ಹುಳಿ. ಸಕ್ಕರೆ ಪೂರಿ, ರಾವಣಭಾತು, ಪಾಯಸ.''

''ರಾವಣಭಾತು, ಪಾಯಸಗಳೇಕೆ ?''

''ಹೆಣ್ಣಿನ ಕಡೆಯವರು ಯಾರಾದರೂ ಊಟಕ್ಕೆ ಬರಬಹುದೆಂದು ಮಾಡಿದೆ''

"ಯಾರೂ ಬರುವುದಿಲ್ಲ. ನೀವೆಲ್ಲಾ ಊಟ ಮಾಡಿ. ನನಗೆ ಮುಚ್ಚಿಟ್ಟು ಬಿಡಿ. ನಾನು ಈ ರಾತ್ರಿ ಯಾವುದೋ ಊರಿಗೆ ಹೋಗಬೇಕಾಗಿದೆ. ಯಾವಾಗ ಬರುತ್ತೇನೋ ಗೊತ್ತಿಲ್ಲ. ನೀವೆಲ್ಲಾ ಈ ಮಧ್ಯಾಹ್ನವೇ ನಿಮ್ಮ ನಿಮ್ಮ ಊರುಗಳಿಗೆ ಹೊರಟುಬಿಡಿ. ಮೂರು ತಿಂಗಳು ರಜಾ ಕೊಟ್ಟಿದ್ದೇನೆ" ಎಂದು ಹೇಳಿ ಪರಿಚಾರಕ, ಸೇವಕರನ್ನೆಲ್ಲಾ ಬೇಗ ಬೇಗ ಊಟಮಾಡಿಸಿ ಅವರವರ ಊರಿಗೆ ಸಾಗ ಹಾಕಿದನು.

ತಾನು ಮನಸ್ಸಿನ ಕಳವಳದಲ್ಲಿ ಏನೂ ಬೇಕಾಗದೆ ಊಟ ಮಾಡಲೇ ಇಲ್ಲ. ಕತ್ತಲಾಗುವವರೆಗೂ ಕಾದು ಮಸಕಾದ ಮೇಲೆ ತಮಾಷೆಗೆಂದು ತಂದು ಎಲ್ಲಿಯೋ ಇಟ್ಟಿದ್ದ ಕೃತಕ ಗಡ್ಡ ಮೀಸೆಗಳನ್ನು ಹೊರಕ್ಕೆ ತೆಗೆದು ಅವುಗಳನ್ನು ಅಂಟಿಸಿಕೊಂಡು ಕರಿ ಗಾಜಿನ ಕನ್ನಡಕವನ್ನು ಹಾಕಿಕೊಂಡು ಹೊರಗೆ ಹೊರಟನು. ತನ್ನ ಪೆಟ್ಟಿಗೆಗಳ ಮೇಲೆಲ್ಲಾ ತನ್ನ ಹೆಸರಿದ್ದರಿಂದ ಎರಡು ಹೊಸ ಪೆಟ್ಟಿಗೆಗಳನ್ನು ಕೊಳ್ಳುವುದು ಮೇಲೆಂದು ಅಂಗಡಿಗೆ ಹೋದನು. ಅಂಗಡಿಯವನು ಪರಿಚಿತನಾದರೂ ಇವನ ಗುರುತು ಹಿಡಿಯಲಿಲ್ಲ. ತನ್ನ ವೇಷ ಪರವಾಗಿಲ್ಲ ಎಂದಂದುಕೊಂಡು ಪೆಟ್ಟಿಗೆಗಳನ್ನು ತೆಗೆದುಕೊಂಡು ಹೊರಡುವಷ್ಟರಲ್ಲಿ ಯಾರೋ ಇಬ್ಬರು ಮಾತನಾಡುವುದು ಕೇಳಿಸಿತು. ಗುರುತಿದ್ದ ಧ್ವನಿಗಳು...

"ಏನು ಭುಜಂಗ, ಅಂಗಡಿಗೆ ಬಂದಿದ್ದೀಯೋ ? ಏನು ಬೇಕು ?"

"ಉಕ್ಕಿನ ಮೊಳೆಗಳು ಹಾಕಿರುವ ಜೋಡಿನ ಜೊತೆಯೊಂದನ್ನು ಕೊಂಡುಕೊಳ್ಳೋಣವೆಂದು ಬಂದೆ".

"ಏಕೆ, ಸೈನ್ಯಕ್ಕೇನಾದರೂ ಸೇರುತ್ತೀಯಾ? ಕೇಳಿದ್ದರೆ, ನನ್ನ ಪೋಲೀಸ್ ಬೂಟ್ಸುಗಳನ್ನೇ ಕೊಡುತ್ತಿದ್ದೆನಲ್ಲಾ".

"ಸೈನ್ಯಕ್ಕೆ ಸೇರುವುದಕ್ಕಲ್ಲ. ಒಂದು ಕಡೆ ಒಂದು ವಿಷ ಸರ್ಪ ಸೇರಿಕೊಂಡಿದೆ. ಅದನ್ನು ಹಾಕಿ ತುಳಿಯಬೇಕು. ಅದಕ್ಕಾಗಿ...ನೀವೇಕೆ ಬಂದಿದ್ದೀರಿ ?"

"ನಾನೂ ಒಂದು ವಿಷ ಸರ್ಪವನ್ನು ರಕ್ತ ಕಾರುವವರೆಗೂ ಹೊಡೆಯಬೇಕಾಗಿದೆ. ಅದಕ್ಕೆ ಒಂದು ಒಳ್ಳೆ ಬೆತ್ತವನ್ನು ತೆಗೆದುಕೊಳ್ಳೋಣವೆಂದು ಬಂದೆ. ನನ್ನಲ್ಲಿ ಆಗಲೇ ಒಂದು ಬೆತ್ತವಿದೆ. ಆದರೆ ಎರಡಿದ್ದರೆ ಇನ್ನೂ ಮೇಲಷ್ಟೆ—''

"ಹಾಗಾದರೆ ಸರ್ಪಗಳಿಗೆ ಒಳ್ಳೆ ವಿಪತ್ಕಾಲ !..."

ಈ ಸಂಭಾಷಣೆಯನ್ನು ಕೇಳಿದ ರಂಗಪ್ಪನು ಥರ ಥರ ನಡುಗಿದನು. ನಡುಕ ದಲ್ಲಿ ಕೈಲಿದ್ದ ಪೆಟ್ಟಿಗೆಗಳು ಕೆಳಗೆ ಬಿದ್ದವು, ಇದನ್ನು ಕಂಡು ಒಡನೆ ಭುಜಂಗನೊಂದು ಲಲಿತೆಯ ತಂದೆಯೊಂದು ಪೆಟ್ಟಿಗೆಯನ್ನು ಎತ್ತಿ, ಅವನ ಕೈಯಲ್ಲಿ ಕೊಡುತ್ತಾ "ಮೈಯಲ್ಲಿ ಸರಿ ಇಲ್ಲವೇನೋ, ಪಾಪ. ಪೆಟ್ಟಿಗೆಗಳು ಯಾಕೆ ?.ಯಾವುದಾದರೂ ಊರಿಗೆ ಹೋಗುತ್ತೀರಾ ?" ಎಂದರು.

ರಂಗಪ್ಪನು ಧ್ವನಿ ಬದಲಾಯಿಸಿಕೊಂಡು "ಹೌದು" ಎಂದನು.

ಲಲಿತೆಯ ತಂದೆಯು "ಯಾವ ಊರಿಗೆ ?" "ನಾನು ಉ...ಬ... ಬದರಿ ಕಾಶ್ರಮಕ್ಕೆ ಹೋಗುತ್ತೇನೆ" "ಓಹೋ ಯಾತ್ರೆಯೇ ? ಯಾವ ರೈಲಿನಲ್ಲಿ?"

"ಮ···ಮ...ಮದ್ರಾಸ್ ರೈಲಿನಲ್ಲಿ"

"ಬಹಳ ದೂರದ ಪ್ರಯಾಣ. ಸರಿಯಾದ ಜಾಗ ಸಿಕ್ಕುವುದೋ ಇಲ್ಲವೋ. ಮೈಯಲ್ಲಿ ಬೇರೆ ಹುಷಾರಿಲ್ಲವೆಂದು ತೋರುತ್ತೆ. ನನಗೆ ರೈಲಿನವರೆಲ್ಲಾ ಗುರ್ತು. ಸ್ಟೇಷನ್ನಿಗೆ ಬಂದು ಸರಿಯಾಗಿ ಜಾಗ ಮಾಡಿಸಿ ಕೊಡುತ್ತೇನೆ...ಇಮ್ಮ ಹೆಸರೇನು?"

"ಇಲ್ಲ. ಬೇಡ, ಬೇಡ, ತೊಂದರೆ ತೆಗೆದುಕೊಳ್ಳಬೇಡಿ"

"ತೊಂದರೆ ಏನಿಲ್ಲ. ಮನಸ್ಸಿಗೆ ತುಂಬ ಬೇಜಾರಾಗಿದೆ. ಇತರರಿಗೆ ಒಂದು ಉಪಕಾರ ಮಾಡುವುದರಲ್ಲಾದರೂ ಅದನ್ನು ಮರಿಯೋಣವೆಂದು, ಅಷ್ಟೆ. ಖಂಡಿತ ಸ್ಟೇಷನ್ನಿಗೆ ಬರುತ್ತೇನೆ...

ರಂಗಪ್ಪನು ಪೆಟ್ಟಿಗೆಗಳನ್ನು ಅಲ್ಲಿಯೇ ಬಿಟ್ಟು ಕೆಟ್ಟೆನಲ್ಲಾ ಎಂದಂದುಕೊಂಡು ಹೊರಟನು. ತನ್ನ ಛದ್ಮ ವೇಷವು ಅವರಿಗೆ ತಿಳದುಹೋಗಿರಬೇಕು ಇಲ್ಲದಿದ್ದರೆ ಹಾಗೇಕೆ ಸ್ಟೇಷನ್ನಿಗೆ ಬರುತ್ತೇನೆಂದು ಹೇಳಿದರು ? ಆ ದಿವಸ ಹೊರಡುವುದು ಸೂಕ್ತವಲ್ಲವೆಂದು ನಿರ್ಧರಿಸಿದನು. ಎಲ್ಲಕ್ಕೂ ವಿಘ್ನಗಳೇ ! ಯೋಚಿಸಿ ಯೋಚಿಸಿ ತಲೆ ನೋವು, ಸುತ್ತಿ ಮೈ ನೋವು, ಊಟವಿಲ್ಲದ ಸಂಕಟ ಎಲ್ಲಾ ಸೇರಿತು. ಮನೆ ಯಲ್ಲಿ ಮಾಡಿಟ್ಟಿದ್ದ ರಾವಣಭಾತು, ಪಾಯಸಗಳು ಜ್ಞಾಪಕ ಬಂತು. ರಾವಣ ಭಾತೆಂದರೆ ಪ್ರಾಣ. ಬೇಗ ಬೇಗ ಮನೆ ಕಡೆ ಹೊರಟನು. ಬೀಗ ತೆಗೆದು ಒಳಗೆ ಹೋಗಲು ಮನೆ ಎಲ್ಲ ಕತ್ತಲು. ಆದರೆ ಅಡಿಗೆ ಮನೆ, ಊಟದ ಮನೆಯಲ್ಲಿ

ಮಾತ್ರ ದೀಪ. ಕಾರಣವೇನಿರಬಹುದೆಂದು ಮೆಲ್ಲಗೆ ಹೆಜ್ಜೆ ಹಾಕುತ್ತ ಊಟದ ಮನೆಯೊಳಕ್ಕೆ ಹೋದನು. ಅಡಿಗೆ ಮನೆಯಿಂದ ಯಾರೋ ಬರುವ ಹಾಗಾಯಿತು. ಬಾಗಿಲ ಹಿಂದೆ ಅವಿತುಕೊಂಡನು. ಕಂಡಿಯಲ್ಲಿ ನೋಡಿದರೆ ಇಬ್ಬರು ಕರಾಳಾಕಾರದ ವ್ಯಕ್ತಿಗಳು. ಗಟ್ಟಿಮುಟ್ಟಾಗಿ ರಾಕ್ಷಸರಂತಿದ್ದಾರೆ. ಒಳಗಿನಿಂದ ಎಲೆ ಮುಂತಾದ್ದನ್ನು ತಂದು ಅಚ್ಚುಕಟ್ಟಾಗಿ ಹಾಕಿಕೊಂಡು ಅಡಿಗೆ ಮನೆಯಿಂದ ಅನ್ನ, ಪಲ್ಯ, ತೊವ್ವೆ, ರಾವಣಭಾತ್, ಪಾಯಸ ಮುಂತಾದವುಗಳನ್ನು ತಂದಿಟ್ಟುಕೊಂಡು ಲಕ್ಷಣವಾಗಿ ಊಟ ಮಾಡಲುಪಕ್ರಮಿಸಿದ್ದಾರೆ। ಊಟ ಮಾಡುತ್ತಾ ಒಬ್ಬ—

"ಲೋ, ಮಲ್ಲ. ಒಳ್ಳೇ ಅದೃಷ್ಟ ಕಣೋ ನಮ್ಮದು. ಮನೆಯವರೆಲ್ಲಾ ಊರಿಗೆ ಹೋಗೋದ್ನ ನೋಡಿದ್ದು ನಮ್ಮ ಪುಣ್ಯ, ಏನೋ ಸಿಕ್ಕಿದ್ದು ಹೊಡಕೊಂಡು ಹೋಗೋಣಾಂತ ಬಂದರೆ, ಒಳ್ಳೇ ಭೇಷಾದ ಉಟಾನೇ ಸಿಕ್ಕಿತು !"

ಮಲ್ಲ ರಾವಣಭಾತನ್ನು ಬಾಯಿಗೆ ತುರುಕಿಕೊಳ್ಳುತ್ತಾ "ಹ್ಞೂ" ಅಂದ.

"ಅಡಿಗೆ ಒಳ್ಳೆ ಚೆಂದಾಗಿ ಮಾಡಿದಾರೆ"

"ಹ್ಞೂ"

"ನಾವು ಕುಡಿದಿದ್ದ ಸಾರಾಯಿನ ಮಜಕ್ಕೂ ಈಊಟಕ್ಕೂ ಸರಿಹೋಯಿತು"

"ಹ್ಞೂ"

"ಏನು ಎಲ್ಲಾದಕ್ಕೂ 'ಹ್ಞೂ ಅಂತಿಯಾ ? ದೊಡ್ಡ ಮನಿಸ್ಸರಂಗೆ ಮಾತಾಡಿಕೊಂಡು ಉಣ್ಣಬೇಕೊ. ಸುಮ್ಮನೆ ಬಕಾಸುರನ ಹಾಗೆ ನುಂಗಿದರೆ ಆಯಿತೆ ?"

"ಲೋ, ರೇಗಿಸಬೇಡ. ನೀನೇ ಬಕಾಸುರ..."

"ಯಾಕೋ ತಲೆ ತಿರುಗುತ್ತೇನೋ ? ಯಾರೋ ಬಕಾಸುರ ?"

"ನೀನು...ನಿಮ್ಮಪ್ಪ"

"ಅಪ್ಪ ಅಂತೀಯಾ ? ಹಾಕ್ತೀನೆ ನೋಡು. ಅಂಗೇ ಮಲಗ್ಬಿಡಬೇಕು"

"ಹಾಕು ನೋಡೋಣ, ಏನ್ಕೈಯೇನು ಪಾಯಸ ತಿಂತದಾ ?"

ಇದನ್ನು ಕೇಳಿ ಮೊದಲನೆಯವನು ಕೈಲಿದ್ದ ರಾವಣಭಾತನ್ನು ಉಂಡೆ ಮಾಡಿ ಇನ್ನೊಬ್ಬನ ಮುಖಕ್ಕೆ ಹೊಡೆದನು. ಅವನು ಅದನ್ನು ಹಿಂತಿರುಗಿಸಿದನು. ಇಬ್ಬರಿಗೂ ಹತ್ತಿತು ಲಟಾಪಟಿ ಜಗಳ. ರಾವಣಭಾತು ಅನ್ಯಾಯವಾಗುವುದನ್ನು ಕಂಡು ರಂಗಪ್ಪನು ಕೋಪದಿಂದ ತನ್ನ ಜೇಬಿನಲ್ಲಿದ್ದ ಬೀಗದ ಕೈಗೊಂಚಲನ್ನು ತೆಗೆದು ಬಾಗಿಲಿನ ಮರೆಯಿಂದ ಎದುರಿಗಿದ್ದವನ ಮೇಲೆ ಗುರಿ ಇಟ್ಟು ಹೊಡೆದನು. ಅದು ಅವನ ಹಣೆಗೆ ತಗುಲಿ ರಕ್ತ ಸುರಿಯಿತು. ಸರಿ, ರಕ್ತ ಕಂಡಕೂಡಲೇ ಶುರುವಾಯ್ತು ತುಮುಲ ಯುದ್ಧ. ಅದುವರೆಗೂ ಅನ್ನ, ಪಾಯಸದಲ್ಲಿ ಹೊಡೆದಾಡುತ್ತಿದ್ದವರು ಪಾತ್ರೆ, ಸೌಟು, ಮಣೆ ಇವುಗಳಿಂದ ಹೊಡೆದಾಡಲು ಆರಂಭಿಸಿದರು. ಯುದ್ಧವು ಐದು ನಿಮಿಷಗಳ ಕಾಲ ಒಂದೇ ಬಿರುಸಿನಿಂದ ನಡೆಯಿತು. ಕೊನೆಗೆ ಒಬ್ಬನ ಕೈಯಲ್ಲಿ ಹಾರೆ, ಮತ್ತೊಬ್ಬನ ಕೈಯಲ್ಲಿ ಒನಕೆ ಸಿಕ್ಕುಬಿದ್ದವು. ಇದಾದ ಮೇಲೆ ಬಹು ಬೇಗ ಯುದ್ಧವು ಕೊನೆಗೊಂಡಿತು. ಅರ್ಧ ನಿಮಿಷದಲ್ಲಿ ಒಬ್ಬರ ತಲೆಯನ್ನೊಬ್ಬರು ಒಡೆದುಹಾಕಿ, ಜ್ಞಾನ ತಪ್ಪಿ. ರಕ್ತ ಸುರಿಸುತ್ತಾ ಬಿದ್ದರು. ಎಲ್ಲವೂ ನಿಶ್ಶಬ್ದವಾದ ಮೇಲೆ ರಂಗಪ್ಪನು ಬಾಗಿಲ ಹಿಂದಿನಿಂದೀಚೆಗೆ ಬಂದನು. ಇಬ್ಬರೂ ಅಲುಗಾಡದೆ ಬಿದ್ದಿದ್ದರು. ಸಾಹಸಪಟ್ಟು ಅವರಿಬ್ಬರನ್ನೂ ಹಗ್ಗದಿಂದ ಕಟ್ಟಿಹಾಕಿ ತೊಟ್ಟಿಯುವರೆಗೂ ಎಳೆದುಕೊಂಡು ಹೋಗಿ ಮಲಗಿಸಿದನು. ಊಟದ ಮನೆಯ ಬಾಗಿಲನ್ನು ಮುಚ್ಚಿ, ತನ್ನ ಗಡ್ಡ ಮೀಸೆಗಳನ್ನು ತೆಗೆದು ಹೊರಗೆ ಬಂದು, ಬೀದಿಯಲ್ಲಿ ಹೋಗುತ್ತಿರುವವರ ಹತ್ತಿರ ಪೋಲೀಸ್ ಠಾಣೆಗೆ ಹೇಳಿಕಳುಹಿಸಿದನು.

ಪೋಲೀಸರಿಗೆ ಕಾಯುತ್ತಿದ್ದಾಗ ಒಳಗೆ ಹೋಗಲು ಮನಸ್ಸು ಬರದೇ ಮೆಟ್ಟಿಲು ಮೇಲೆಯೇ ನಿಂತನು. ತಂಗಾಳಿಯು ಹಿತಕರವಾಗಿ ಬೀಸುತ್ತಿತ್ತು. ಅಷ್ಟರಲ್ಲಿ ಕತ್ತಲಿನಿಂದ ಯಾರೋ ಮುಂದೆ ಬಂದ ಹಾಗಾಯಿತು.

"ರಂಗಪ್ಪನವರು ತಾನೆ? ನಮಸ್ಕಾರ, ರಂಗಪ್ಪನವರೆ ! ನಿಮ್ಮ ಹತ್ತಿರ ಒಂದು ಮಾತಾಡಬೇಕಾಗಿದೆ – ಒಂದೇ ಒಂದು ಮಾತು !" ನೋಡಿದರೆ ಪೈಲ್ವಾನ್ ಭುಜಂಗ !

ಆದರೆ ಭುಜಂಗನ ಎರಡರಷ್ಟಿದ್ದ ಕಳ್ಳರ ಮಲ್ಲಯುದ್ಧವನ್ನು ನೋಡಿ, ಆಗ ತಾನೆ ಹೊರಗೆ ಬಂದಿದ್ದ ರಂಗಪ್ಪನಿಗೆ ಮನಸ್ಸಿನಲ್ಲನ್ನಿಸಿತು. "ಈ ಪ್ರಾಣಿಗೇಕೆ ನಾನು ಹೆದರಿದೆ ? ಇಂತಹವರು ನಾಲಕ್ಕು ಜನಗಳನ್ನು ಸೇರಿಸಿದರೂ ಆ ಕಳ್ಳರಲ್ಲಿ ಒಬ್ಬನ ಸಮಾನವಿಲ್ಲವಲ್ಲ !" ಎಂದು.

ಘಟ್ಟಿಯಾಗಿ "ಯಾರದು ? ಭುಜಂಗರಾಯರೇ ?" ಎಂದನು. ಅಷ್ಟು ಹೊತ್ತಿಗೆ ಎಂಟೊಂಬತ್ತು ಜನ ಪೋಲಿಸನವರು ಒಂದು ಪೋಲೀಸ್ ಮೋಟಾರಿನಲ್ಲಿ ಬಂದಿಳಿದರು. ಅವರ ಮುಖ್ಯಸ್ಥನು "ರಂಗಪ್ಪನವರು ಯಾರು ?" ಎಂದನು.

"ನಾನೇ ರಂಗಪ್ಪ. ಒಳಗೆ ಹೋಗಿ, ತೊಟ್ಟಿಯಲ್ಲಿ ಅವರನ್ನು ಕಟ್ಟಿ ಉರುಳಿ ಸಿದ್ದೇನೆ. ನನ್ನ ಕೋಪದಲ್ಲಿ ಸ್ವಲ್ಪ ಒರಟಾಗಿಯೇ ವರ್ತಿಸಿದೆ. ಏಟು ಬಲ ವಾಗಿಯೇ ಬಿದ್ದಿರಬೇಕು. ರಾಣೆಗೆ ಹೋದ ಒಡನೆ ಒಬ್ಬ ವೈದ್ಯನಿಗೆ ಹೇಳಿಕಳು ಹಿಸಿರಿ..."

"ಅಷ್ಟರಮಟ್ಟಿಗಾಗಿದೆಯೇ ?"

"ಹಾಗೇ ತೋರುತ್ತೆ. ನೀವೇ ನೋಡಿ..."

ಪೋಲೀಸಿನವರು ಒಳಗೆ ಹೋದರು. ಸ್ವಲ್ಪ ಹೊತ್ತಿನ ಮೇಲೆ ನಾಲ್ಕು ನಾಲ್ಕು ಜನ ಒಬ್ಬೊಬ್ಬ ಕಳ್ಳನನ್ನು ಹೊತ್ತುಕೊಂಡು ಹೊರಗೆ ಬಂದರು. ಮೋಟಾರಿನಲ್ಲಿ ಹಾಕಿಕೊಂಡ ಮೇಲೆ ಅವರ ಮುಖ್ಯಸ್ಥನು ಬಂದು,

"ಇಬ್ಬರೂ ಭಾರಿ ಕೇಡಿಗಳು. ಎಷ್ಟೋ ಖೂನಿ, ದರೋಡೆಗಳನ್ನು ಮಾಡಿ ದ್ದಾರೆ. ಅಷ್ಟು ದಿನಗಳಿಂದ ಹುಡುಕುತ್ತಿದ್ದೆವು, ಸಿಕ್ಕಲಿಲ್ಲ. ಈವತ್ತು ನಿಮ್ಮ ದಯ ದಿಂದ ಸಿಕ್ಕಿಬಿದ್ದರು. ಅದು ಹೇಗೆ ಒಬ್ಬೊಂಟಿಗರಾಗಿ ಅವರನ್ನು ಹಿಡಿದು ಕಟ್ಟಿ ಹಾಕಿದರೋ ದೇವರಿಗೆ, ಗೊತ್ತು. ಅಂತು ಚೆನ್ನಾಗಿ ಏಟು ಬಿದ್ದಿದೆ. ಇನ್ನೂ ಜ್ಞಾನ ಬರಲಿಲ್ಲ" ಎಂದು ಹೇಳಿ ಹೊರಟುಹೋದನು.

ಇದನ್ನೆಲ್ಲಾ ನೋಡುತ್ತಿದ್ದ ಭುಜಂಗರಾಯನು "ಏನಿದು, ವಿಚಾರ ?" ಎಂದನು.

"ಓಹೋ, ವೈಲ್ವಾರ್ ಭುಜಂಗರೆ ? ನೀವಿನ್ನೂ ಇಲ್ಲೇ ಇದ್ದಿರಾ ? ಮರೆತೇ ಬಿಟ್ಟೆ...ಅವರೆ ? ಅವರಿಬ್ಬರೂ ಕಳ್ಳರು. ಯಾರು ಇಲ್ಲದ್ದನ್ನು ನೋಡಿ ಒಳಗೆ ನುಗ್ಗಿ ಎಲ್ಲವನ್ನೂ ಹೊಡೆದುಕೊಂಡು ಹೋಗುವದರಲ್ಲಿದ್ದರು. ಅದಕ್ಕೆ ಸರಿಯಾಗಿ ನಾನು ಮನೆಗೆ ಬಂದೆ. ನೋಡಿ ರೇಗಿ ಹೋಯಿತು. ಇಬ್ಬರಿಗೂ ಚೆನ್ನಾಗಿ ನಾಲ್ಕು ಬಿಟ್ಟೆ...ನೀವೇ ನೋಡಿದಿರಲ್ಲಾ ಅವರ ಸ್ಥಿತಿ !"

"ನೀವೊಬ್ಬರೇ...ಅವರನ್ನು...ಆ ರೀತಿ..."

"ಹೌದು ನಾನೊಬ್ಬನೇ...ಕೋಪ ಬಂದಂಬಿಟ್ಟರೆ ನನ್ನ ಬಲ ನನಗೇ ಗೊತ್ತಾಗುವುದಿಲ್ಲ. ಅವರನ್ನು ಕೊಂದುಬಿಟ್ಟಿದ್ದರೆ, ನರಹತ್ಯಾಪಾತಕ್ಕೊಳಗಾಗುತ್ತಿದ್ದೆ, ಇನ್ನು ಮೇಲೆ ಕೋಪ ಬಂದಾಗ ಜ್ಞಾಪಕದಿಂದ ತಾಳ್ಮೆ ತಂದುಕೊಳ್ಳಬೇಕು" ಎಂದು ಜೇಬಿನಿಂದ ಕರವಸ್ತ್ರವನ್ನು ತೆಗೆದು ಒಂದು ಗಂಟು ಹಾಕಿಕೊಂಡನು.

"ಅದು ಹೋಗಲಿ. ನೀವೇನೊ ಮಾತಾಡಬೇಕೆಂದಿರಲ್ಲ—ಒಳಗೆ ಬನ್ನಿ. ಯಾರೂ ಇಲ್ಲ. ಸೇವಕರಿಗೆಲ್ಲಾ ರಜಾ ಕೊಟ್ಟಿದ್ದೇನೆ. ನಾವಿಬ್ಬರೇ ಇರಬಹುದು."

ಪೈಲ್ವಾನ್ ಭುಜಂಗನು ಹಿಂದೆ ಸರಿಯುತ್ತಾ "ಇಲ್ಲ, ಇಲ್ಲ, ಏನೂ ಇಲ್ಲ. ನಿಮ್ಮ ಮದುವೆ ಯಾವಾಗ ಕೇಳೋಣವೆಂದು ನಾನು ಬಂದೆ. ಊರಿನಲ್ಲಿರುವುದಿಲ್ಲ; ಓದಿಸುವುದಕ್ಕೆ ಕಳುಹಿಸುವುದಕ್ಕೆ ತಾರೀಖು ತಿಳಿದುಕೊಂಡು ಹೋಗೋಣವೆಂದು ಬಂದೆ ಅಷ್ಟೆ..."

"ಎಲ್ಲಿಗೆ ಹೋಗುತ್ತೀರಿ ?"

"ರಾಮೇಶ್ವರಕ್ಕೆ... ಅಲ್ಲಿಂದ ಕಾಶಿಗೆ ಹೋದರೂ ಹೋಗಬಹುದು...ಲಗ್ನ ಪತ್ರಿಕೆಯನ್ನು ರಾಮೇಶ್ವರಕ್ಕೆ ಕಳುಹಿಸಿ—ನನಗೆ ಸೇರುತ್ತೆ..."

"ಹಾಗಾದರೆ ಒಳಗೆ ಬರುವುದಿಲ್ಲವೆ ? ಅಲ್ಲ, ಅದೇನು ವಿಚಿತ್ರವಾದ ಜೋಡು ಹಾಕಿಕೊಂಡಿದ್ದೀರಿ ?"


"ನನಗೆ ಕಾಲಿನಲ್ಲಿ ಆಣಿ ಬೆಳದಿದೆ. ನಡೆಯುವುದಕ್ಕೆ ಆರಾಮವಾಗಿರಲಿ ಎಂದು—ಅಷ್ಟೆ"

"ಸರಿ. ಹಾಗಾದರೆ ಒಳಗೆ ಬರುವುದಿಲ್ಲವೆ ?...ನಮಸ್ಕಾರ".


"ನಮಸ್ಕಾರ".

"ನಮಸ್ಕಾರ"

ರಂಗಪ್ಪನು ಲಲಿತೆಯನ್ನು ಮದುವೆಯಾದಾಗ ಊರಿಗೆ ಊರೇ ಬಂದಿತ್ತು. ಎಲ್ಲರ ಬಾಯಲ್ಲಿಯೂ ಇವನು ಕಳ್ಳರನ್ನು ಹಿಡಿದು ಹಾಕಿದ ಸಾಹಸದ ಮಾತೇ. ಸರ್ಕಾರದವರು ಭಾರೀ ಇನಾಮನ್ನು ಕೊಟ್ಟಿದ್ದೇ ಅಲ್ಲದೇ "ವೀರ ಬಹದ್ದೂರ್" ಎಂಬ ಬಿರುದನ್ನೂ ಕೊಟ್ಟರು. ಅಂತೂ ಎಲ್ಲಾ ರಾವಣಭಾತಿನ ಮಹಿಮೆ......




ಶುಭಾಶಯಂಗಳೊಂದಿಗೆ



ಎಸ್. ವಿ. ಆರ್. ಏಜನ್ಸೀಸ್

ಬೆಂಗಳೂರು

REGISTERED No. BGW-180



Printed by V. R. NATH for the Publisher M. SHIVA KUMAR. Published and owned by M. SHIVA KUMAR, 36, 6th Main Road, Malleswarm, Bangalore-560 003. Printed at IMPRESSIONS, 404, Sampige Road, Malleswaram, Bangalore-560 003. Eiditor : M. SHIVA KUMAR.